ಅನುಭವಾಮೃತ

ಲೇಖಕರು :

ಬಿ. ಎ. ಎಸ್. ಉಪಾಧ್ಯಾಯ

ಬೀಜಾಡಿ, ಕೋಟೇಶ್ವರ

ಪ್ರಕಾಶಕರು :

ಶ್ರೀ ವಿಷ್ಣುಮೂರ್ತಿ ಯಕ್ಷಗಾನ ಸಂಘ

ಬೀಜಾಡಿ

ಅನುಭವಾಮೃತ

ಲೇಖಕರು :

ಬಿ. ಎ. ಎಸ್. ಉಪಾಧ್ಯಾಯ

ಬೀಜಾಡಿ, ಕೋಟೇಶ್ವರ

ಪ್ರಕಾಶಕರು :

ಶ್ರೀ ವಿಷ್ಣುಮೂರ್ತಿ ಯಕ್ಷಗಾನ ಸಂಘ

ಬೀಜಾಡಿ

ANUBHAVAMRITHA

by B.A.N. UPADHYAYA, Bijadi, Koteshwar. ✆ : 761156

Published by Shri Vishnumurthy Yakshagana Sangha,
Bijadi, Koteshwara - 576 222.

ಪ್ರಥಮ ಮುದ್ರಣ : 2004

ಹಕ್ಕುಗಳು : ಕಾದಿರಿಸಲಾಗಿದೆ

ಪ್ರತಿಗಳು : 1000

ಮುದ್ರಣ : ಪ್ರಸಾದ ಪ್ರಿಂಟರ್ಸ್, ಕೋಟೇಶ್ವರ

ಬೆಲೆ : ರೂ. 35.00

ಮುನ್ನುಡಿ

ಶ್ರೀ ಬೀಜಾಡಿ ಎ. ನಾರಾಯಣ ಉಪಾಧ್ಯಾಯರು ಕಲೆ, ಸಾಹಿತ್ಯ, ಸಂಸ್ಕೃತಿ ಮತ್ತು ಜಾನಪದದ ಬಗ್ಗೆ ಅಧ್ಯಯನ ಪೂರ್ಣ ಜ್ಞಾನವನ್ನು ಗಳಿಸಿಕೊಂಡಿರುವ ವ್ಯಕ್ತಿ. ಆದ್ದರಿಂದಲೇ ಅವರಿಂದ ಇಂತಹ ಸತ್ವಪೂರ್ಣ ನವರಸ ಭರಿತ ಕೃತಿಯೊಂದು ಹೊರಬರಲು ಸಾಧ್ಯವಾಗುತ್ತಿದೆ. ಪೌರಾಣಿಕ ಯಕ್ಷಗಾನ ಪ್ರಸಂಗಗಳೊಡನೆ ಅನೇಕ ಸಾಮಾಜಿಕ, ಐತಿಹಾಸಿಕ ಪ್ರಸಂಗಗಳನ್ನು ರಚಿಸಿ, ತಮ್ಮದು ಯಕ್ಷಗಾನ ಪ್ರಸಂಗಗಳ ರಚನೆಯಲ್ಲಿ ಹರಿತವಾದ ಲೇಖನಿ ಎಂಬುದನ್ನು ಅನುಭವಾಮೃತವೆಂಬ ಕೃತಿಯ ಮೂಲಕ ತೋರ್ಪಡಿಸಿದ್ದಾರೆ. ಪ್ರಸಂಗದಲ್ಲಿ ಬಳಸಿರುವ ಸಾಹಿತ್ಯವೂ ಕೂಡಾ ಇವರ ಸಾಹಿತ್ಯ ಪ್ರೌಢಿಮೆಗೆ ಹಿಡಿದ ಕೈಗನ್ನಡಿ.

ವ್ಯಾಪಾರೀಕರಣ, ಜನರಂಜನೆಯ ಈ ಕಾಲಘಟ್ಟದಲ್ಲಿ ಕೃತಿಯ ಆಶಯವನ್ನು ಸ್ಪಷ್ಟವಾಗಿ ಬಳಸಿಕೊಂಡು, ಪ್ರಸಂಗವನ್ನು ಗೈದ ರೀತಿ ನಿಜಕ್ಕೂ ಆಕರ್ಷಕವಾಗಿದೆ. ಕೃತಿ ರಚನೆಯಲ್ಲಿ ಎಲ್ಲೂ ಅಶ್ಲೀಲ ಸಾಹಿತ್ಯದ ಅಥವಾ ಸಾಂಸ್ಕೃತಿಕ ಅಧಃಪತನದ ಜಾಡನ್ನು ಕಾಣಲು ಸಾಧ್ಯವಿಲ್ಲದಿರುವುದು ಉತ್ತಮ ಬೆಳವಣಿಗೆ.

ಇನ್ನು ಈ ಕೃತಿಯಲ್ಲಿ ಬರುವ ಕಾಮುನಹಬ್ಬದ ವರ್ಣನೆ, ರಾಜನು ಕಾಮುವನ್ನು ಅನುಭವಿಸುವುದು, ಸಿಂಗಿಯ ಪ್ರಕರಣ, ಸಿಂಗಿಯ ಚಾಣಾಕ್ಷತನ, ಬೇವಿನ ಚರರೊಂದಿಗೆ ಚತುರ ಮತಿಯ ಸಂಭಾಷಣೆ, ಕುರುಡನ ವಾಕ್ ವೈಖರಿ ಮನ ಮುಟ್ಟುವಂತಿದೆ. ಮೈನಾಂಕನ ಪ್ರಕರಣದಲ್ಲಿ ಚತುರಮತಿಯು ಗುಣವಂತೆಯ ಜನ್ಮ ರಹಸ್ಯವನ್ನು ಹೇಳಿದಾಗ, ಸಹಜವಾಗಿ ಹುಟ್ಟುಕುರುಡನಾದ ಚತುರಮತಿಗೆ ಈ ಬಗೆಯ ಜ್ಞಾನ ಲಭ್ಯವಾದದ್ದು ಹೇಗೆ? ಎನ್ನುವ ಕುತೂಹಲ. ಪರಿಹಾರವೂ ಕುರುಡನಿಂದಲೆ ಕೇಳಿದಾಗ ಕುರುಡನು ಅದರ ವಿಧಿ ವಿಧಾನದೊಂದಿಗೆ ವಿವರಿಸಿದಾಗ, ಸಂತೋಷ ವುಂಟಾಗಿ ಕುರುಡನಿಗೆ ಮನ್ನಣೆಯನ್ನು ಕೊಡುತ್ತಾನೆ. ಏಕದಂಡ ಮುನಿಯ ಶಾಪ - ಇಂದುಶರ್ಮನ ಬೇಟೆಯ ನಂತರ ಮೈನಾಂಕನಿಗೆ ದೇವತೆಯ ದರ್ಶನದೊಂದಿಗೆ ಪ್ರಕರಣ ಸುಖಾಂತ್ಯವಾಗುತ್ತದೆ. ಆದರೆ ಚತುರಮತಿಯ ಮುಂದಿನ ಬದುಕೇನಾಯಿತು ಎಂದು ತಿಳಿದು ಬರುವುದಿಲ್ಲ. ಒಟ್ಟಾರೆ ಉಪಾಧ್ಯಾಯರ ಮಹತ್ವಾಕಾಂಕ್ಷೆಯ ಕೃತಿ ಜನರ ಮನವನ್ನು ಗೆಲ್ಲುವಲ್ಲಿ ಖಂಡಿತ ಯಶಸ್ವಿಯಾಗಲಿದೆ. ಶ್ರದ್ಧೆಯ ಫಲವಾದ ಈ ಕೃತಿಗೆ ಯಕ್ಷಗಾನ ರಂಗದಲ್ಲಿ ಒಳ್ಳೆಯ ಪ್ರಚಾರ, ಮನ್ನಣೆ ದೊರೆಯಲೆಂಬುದು ನಮ್ಮ ಆಶಯವಾಗಿದೆ.

ಭಾಗವತ ನೀಲಾವರ ಲಕ್ಷ್ಮೀನಾರಾಯಣಯ್ಯ
ನಿವೃತ್ತ ಅಧ್ಯಾಪಕ
ಆಕಾಶವಾಣಿ ಕಲಾವಿದ
ಹೆರಂಜೆ - ಕುಂಜಾಲು

ಪ್ರಕಾಶಕರ ನುಡಿ

ಶ್ರೀಯುತ ವಿದ್ವಾನ್ ಬೀಜಾಡಿ ನಾರಾಯಣ ಉಪಾಧ್ಯಾಯರ "ಅನುಭವಾಮೃತ" ಯಕ್ಷಗಾನ ಪ್ರಸಂಗವನ್ನು ಪ್ರಕಟಗೊಳಿಸಲು ಹರ್ಷಗೊಳ್ಳುತ್ತೇವೆ. ಈ ಕೃತಿ ಸೇರಿ ಶ್ರೀ ವಿಷ್ಣುಮೂರ್ತಿ ಯಕ್ಷಗಾನ ಸಂಘದಿಂದ ಇದೇ ಲೇಖಕರಿಂದ ಏಳು ಕೃತಿಗಳು ಪ್ರಕಟಗೊಂಡಿರುತ್ತದೆ. ಅಲ್ಲದೇ ಈ ಹಿಂದೆ ಎರಡು ಕೃತಿಗಳು ಪ್ರಕಟಗೊಳಿಸಿರುತ್ತಾರೆ.

ಶ್ರೀಯುತ ಉಪಾಧ್ಯಾಯರು ಆಧ್ಯಾತ್ಮಿಕ ಗ್ರಂಥಗಳನ್ನೂ, ಯಕ್ಷಗಾನ ಪ್ರಸಂಗಗಳನ್ನೂ ಅಲ್ಲದೇ ಜಿಜ್ಞಾಸು ಕೃತಿಗಳನ್ನು ಬರೆದಿರುತ್ತಾರೆ. ಇವರು ಭಾಮಿನಿ ಷಟ್ಪದಿ ಮತ್ತು ಯಕ್ಷಗಾನ ಪ್ರಸಂಗ ರಚಿಸುವುದರಲ್ಲಿ ಸಿದ್ಧಹಸ್ತರು (God Gift) ತಮ್ಮದೇ ಆದ ವಿಶಿಷ್ಟ ಶೈಲಿ, ಶಬ್ದ ಜೋಡಣೆ, ಛಂದಸ್ಸು, ಲಯಬದ್ಧವಾಗಿ ಹಾಡಲು ಭಾಗವತಿಗೆಗೆ ಯಾವ ತೊಡಕುಂಟಾಗುವುದಿಲ್ಲ.

ಈ "ಅನುಭವಾಮೃತ" ಯಕ್ಷಗಾನ ಪ್ರಸಂಗ ಕಥೆಯು ವೈಶಿಷ್ಟ್ಯಪೂರ್ಣವಾಗಿದೆ. ಸಮಾಜದ ಸಂಪ್ರದಾಯ ಪದ್ಧತಿಯಿಂದ ಮಾನವ ಜೀವನದಲ್ಲಿ ಅಂಧತನ ಏರುಪೇರನ್ನುಂಟುಮಾಡುತ್ತದೆ. ವ್ಯಕ್ತಿಯ ವ್ಯಕ್ತಿತ್ವವನ್ನು ನಾಶ ಮಾಡುತ್ತದೆ. ವ್ಯಕ್ತಿತ್ವವನ್ನು ಕಳೆದುಕೊಂಡರೂ ಧೃತಿಗೆಡದೆ ಧೈರ್ಯದಿಂದ ತನ್ನದೇ ಆದ ಜೀವನವನ್ನು ರೂಪಿಸಿಕೊಳ್ಳಬಹುದು. ಆದರ್ಶ ಜೀವನವನ್ನು ನಡೆಸಬಹುದೆಂಬ ಚಿತ್ರಣವನ್ನು ಸೊಗಸಾಗಿ ರಸವತ್ತಾಗಿ ರಚಿಸಿದ್ದಾರೆ. ಈ ಪ್ರಸಂಗವು ಜನರ ಮೆಚ್ಚುಗೆಯನ್ನು ಗಳಿಸುತ್ತದೆ ಎಂಬ ಭರವಸೆಯಿದೆ.

ಈ ಕೃತಿಯನ್ನು ಹೊರತರಲು ಧನವಿತ್ತು ಸಹಕರಿಸಿದ ಎಲ್ಲಾ ದಾನಿಗಳಿಗೂ ಮತ್ತು ಮುಂದೆ ಪ್ರಕಟಗೊಳಿಸುವ ಗ್ರಂಥಗಳಿಗೂ ಇದೇ ರೀತಿ ಪ್ರೋತ್ಸಾಹವನ್ನು ನೀಡುವ ಭರವಸೆಯನ್ನು ಹೊಂದಿರುವೆವು. ಇವರೇ ಬರೆದಿರುವ "ಶೂನ್ಯದಿಂದನಂತ" ಎಂಬ ಗ್ರಂಥವನ್ನು ಬಿಡುಗಡೆ ಮಾಡಲಿರುವುದನ್ನು ತಿಳಿಸಲು ಸಂತೋಷಪಡುತ್ತೇವೆ.

ಬಿ. ವಾಸುದೇವ ವರ್ಣ ಬಡಾಕೆರೆ
ಕಾರ್ಯದರ್ಶಿ, ಶ್ರೀ ವಿಷ್ಣುಮೂರ್ತಿ ಯಕ್ಷಗಾನ ಸಂಘ
ಬೀಜಾಡಿ, ಕೋಟೇಶ್ವರ

ಕೃತಿ ಕರ್ತರ ಅನಿಸಿಕೆ

ಇತ್ತಿತ್ತ ಯಕ್ಷಗಾನ ಕಲೆಯು ಪ್ರೇಕ್ಷಕ ವರ್ಗವನ್ನು ಕಳೆದುಕೊಳ್ಳುತ್ತಿದೆ. ಕಾರಣ ಹಲವಾರು. ಈ ಕಲೆಯು ಹಿಂದೆ ಜನರ ಆಕರ್ಷಿತ ಕಲೆಯಾಗಿ ಹುಟ್ಟಿ ಸಾಮಾನ್ಯರಿಂದ ಪೇಟೆಯವರಿಗೂ ಮನರಂಜನೆಗೆ ಯಕ್ಷಗಾನ ಆಟ-ಕೂಟ, ಹರಿಕಥೆ ಬಿಟ್ಟರೆ ಬೇರೆ ಯಾವುದೆ ಕಲೆಯು ಇಲ್ಲದಿರುವಾಗ ಇದು ಜನಮನವನ್ನು ಗೆದ್ದ ಕಲೆ. ಈಗ ಸಿನಿಮಾವೇ ಸರ್ವವೆನ್ನುವಷ್ಟರಲ್ಲಿ ಟಿವಿಯ ಉಗಮವಾಯಿತು. ಈ ಟಿವಿಯಿಂದ ಎಲ್ಲ ಕಲೆಯು ಹಿಂದೆ ಸರಿದಿರುತ್ತದೆ. ಆದರಲ್ಲಿಯೂ ಯಕ್ಷಗಾನಕ್ಕೆ ಅಧಿಕ ನಷ್ಟವಾಗಿದೆ. ಇದು ಕಾಲದ ಮಹಿಮೆ.

ಇನ್ನು ಯಕ್ಷಗಾನಕ್ಕೆ ಪುರಾಣವೇ ಪ್ರಸಿದ್ಧ. ಪುರಾಣ ಬಿಟ್ಟರೆ ಯಕ್ಷಗಾನವೆ ಇಲ್ಲ ಎನ್ನುವುದು ಸಮಂಜಸವಲ್ಲ, ರತ್ನಾವತಿ ಕಲ್ಯಾಣ ಯಾವ ಪುರಾಣದಿಂದ ರಚಿಸಿದ್ದು? ಆದರೂ ಕಥೆಯಲ್ಲಿ ಗಟ್ಟಿ ಇರುವುದರಿಂದ ಪ್ರಸಿದ್ಧ ಕಥಾನಕವೆನಿಸಿಕೊಂಡು ಜನಾನುರಾಗಿಯಾಗಿರುತ್ತದೆ. ಆದುದರಿಂದ ಯಕ್ಷಗಾನ ಪ್ರಸಂಗ ಧರ್ಮ, ನೀತಿಯನ್ನೂ ಬೋಧಿಸುವಂತದ್ದಾಗಿದ್ದರೆ ಜನ ಮೆಚ್ಚುತ್ತಾರೆಂದು ನನ್ನ ಅನಿಸಿಕೆ.

ಈ ಯಕ್ಷಗಾನಕ್ಕೆ ಬರೇ ನೋಟಕರೆ ಹೊಣೆಯಲ್ಲ, ಕಥಾನಕವು ಪೂರ್ಣವಲ್ಲ. ನಟನೆ ಅಧಿಕವಿರುತ್ತದೆ. ಯಾವುದೇ ಪಾತ್ರವನ್ನು ಅಭಿನಯಿಸುವವನು ಆ ಪಾತ್ರವನ್ನೂ ಪೂರ್ಣ ಪರಿಚಯಿಸಿಕೊಂಡು, ಮೈದುಂಬಿಸಿಕೊಂಡಿರುವುದಾದರೆ ಆ ಪಾತ್ರ ರಂಜಿಸುವುದು. ಪಾತ್ರದ ಮಿತಿಯನ್ನು ಮೀರಿ ಹೊರ ಹೋದಲ್ಲಿ, ಪಾತ್ರವನ್ನೆ ನಿರ್ನಾಮ ಮಾಡಿದಂತೆ. ಇತ್ತಿತ್ತ ಈ ಬಗ್ಗೆ ಕಲಾವಿದರು ಗಮನ ಹರಿಸದಿರುವುದು ದೊಡ್ಡ ನ್ಯೂನ್ಯತೆ.

ಯಕ್ಷಗಾನ ಬಯಲಾಟ ವಾ ಟೆಂಟಾಟವು ರಾತ್ರಿ 10 ಗಂಟೆಯಿಂದ ಬೆಳಗಿನವರೆಗೆ ಹಿಂದೆ ನಡೆಯುತ್ತಿತ್ತು. ಈಗಲೂ ನಡೆಯಬೇಕೆಂದರೆ ಸಾಧ್ಯವಾಗದು. ಕಾರಣ ಹಿಂದೆ ರಾತ್ರಿ ಪೂರ್ಣ ಆಟವನ್ನು ನೋಡುವಷ್ಟು ಜನರು ಆರೋಗ್ಯವಂತರಾಗಿದ್ದರೂ, ಈಗ ಹಾಗಿಲ್ಲ.

ಹಿಂದೆ ಇದ್ದುದರಲ್ಲಿಯೆ ನೆಮ್ಮದಿಯನ್ನು ಕಾಣುತ್ತಿದ್ದರು. ಈಗ ಎಷ್ಟೇ ಸಂಪಾದಿಸಿದರೂ ಸಾಕಾಗದು. ಕಾರಣ ಸ್ಪರ್ಧಾತ್ಮಕವಾದ ಜೀವನ. ಈ ಜೀವನ ಶೈಲಿಯಲ್ಲಿ ಯಾವುದೇ ಮನ ರಂಜನೆಯನ್ನು 3 ಗಂಟೆಯ ನಂತರ ಕುಳಿತು ನೋಡಲಿಕ್ಕೂ, ಕೇಳಲಿಕ್ಕೂ ವ್ಯವಧಾನವೇ ಇರದು.

ಕೆಲವು ಬಯಲಾಟ ಮೇಳದಲ್ಲಿ ರಂಗಸ್ಥಳದ ಮುಂದೆ 12 ಗಂಟೆಯ ನಂತರ ಪ್ರೇಕ್ಷಕರೇ ಇಲ್ಲದಿರುವ ಪರಿಸ್ಥಿತಿ ಬಂದರೆ, ಮಂದರ್ತಿ, ಮಾರಣಕಟ್ಟೆ, ಕಟೀಲು ಕೆಲವು ಮೇಳಗಳಿಗೆ ಆಡಿಸಿದವರ ಕುಟುಂಬಸ್ಥರು, ಬಂಧು - ಬಳಗದವರು ಬಂದು, ಬೆಳಗಿನವರೆಗೂ ಆಟವನ್ನು ನೋಡುತ್ತಾರೆಂಬುವುದು ಮರೆಯುವಂತಿಲ್ಲ.

ಬಿ. ಎ. ಎಸ್. ಉಪಾಧ್ಯಾಯ

ಅನುಭವಾಮೃತ

ಓಂ ನಮೋ ಭಗವತೇ ವಾಸುದೇವಾಯ ನಮಃ

ಹಿಂದೆ ಒಂದಾನೊಂದು ಕಾಲದಲ್ಲಿ ಮಾಗಧ ದೇಶವನ್ನು ಸೂರ್ಯದತ್ತನೆನ್ನುವವನು ರಾಜನಾಗಿ ವೈಭವದಿಂದಾಳುತ್ತಿದ್ದನು. ಆತನು ತನ್ನ ಪೂರ್ವಿಕರು ನಡೆಸಿಕೊಂಡು ಬಂದ ಕಾಮನ ಹಬ್ಬವನ್ನು ಅತೀ ಉತ್ಸಾಹದಿಂದ ನಡೆಸಬೇಕೆಂದು ತೀರ್ಮಾನಿಸಿ, ಕಾಮನ ಹುಣ್ಣಿಮೆಯ ಮೊದಲು ಹುಣ್ಣಿಮೆಯ ಮರುದಿನದಿಂದ ಪ್ರಾರಂಭವಾಗಿ, ಹೋಳಿ ಹುಣ್ಣಿಮೆಯವರೆಗೆ, ಹೋಳಿ ಹುಣ್ಣಿಮೆಯೇ ಅತೀ ವೈಭವದ ದಿನ.

ಈ ವರ್ತಮಾನವು ಮಾಗಧದಲ್ಲಿ ಮಾತ್ರವಲ್ಲದೆ, ಅಕ್ಕಪಕ್ಕದ ಊರುಗಳಲ್ಲಿಯೂ ಪ್ರಚಾರಕ್ಕೆ ಬಂದಿತು. ಹಾಗೆ ಪ್ರಚಾರಕ್ಕೆ ಬಂದ ದೇಶ ಕಾಂಭೋಜವು ಒಂದು. ಅಲ್ಲಿ ತಂದೆ ತಾಯಿಗಳನ್ನು ಬಾಲ್ಯದಲ್ಲಿಯೇ ಕಳೆದುಕೊಂಡು, ಅಜ್ಜಿಯ ಜೊತೆಯಲ್ಲಿ ವಾಸಿಸುವ, ವೈಶ್ಯ ಜಾತಿಯ ಅಕಿಲಲೆಂಬವಳು, ಈ ವರ್ತಮಾನವನ್ನು ತಿಳಿದು, ಪ್ರಭಾವಿತಳಾಗಿ ಮಾಗಧದಲ್ಲಿರುವ ತನ್ನ ತಾಯಿಯ ತಂಗಿಯ ಮನೆಗೆ ಉತ್ಸವದಲ್ಲಿ ಭಾಗಿಯಾಗುವುದಕ್ಕಾಗಿ ಬರುತ್ತಾಳೆ. ಆ ಹಬ್ಬದಲ್ಲಿಯ ವಿಶೇಷ ಕ್ರಮ; ಒಂದು ತಿಂಗಳ ಪರಿ ಯಾವುದೇ ಸಾಂಸಾರಿಕ ನಿಯಮವಿರುವುದಿಲ್ಲ. ಯಾರ ಹೆಂಡತಿಯು ತನ್ನ ಸ್ವಯಂ ಇಚ್ಛೆಯಂತೆ ಅನ್ಯ ಯಾವುದೇ ಪುರುಷನನ್ನು ಬೆರೆತರೂ, ಗಂಡನಿಗೆ ಕೇಳುವ ಹಕ್ಕು ಇರುವುದಿಲ್ಲ. ಗಂಡಸು ಸಹ ಅಂತೆಯೆ. ಒಟ್ಟಿನಲ್ಲಿ ಆಹಾರ-ವಿಹಾರ, ಜಾತಿ-ಮತ, ಅಧಿಕಾರ ಯಾವುದು, ಯಾರು ಏನೇ ಮಾಡಿದರೂ ಮತ್ತೊಬ್ಬರು ಪ್ರಶ್ನಿಸುವಂತಿಲ್ಲ. ಅರಸ ಚಾರಕಿಯನ್ನು, ಚಾರಕಿ ಅರಸನನ್ನು, ಶೂದ್ರ ಸ್ತ್ರೀಯು ಬ್ರಾಹ್ಮಣನನ್ನು, ಬ್ರಾಹ್ಮಣ ಸ್ತ್ರೀ ಶೂದ್ರನನ್ನೂ ಕೂಡಬಹುದು. ಆದರೆ ಬಲಾತ್ಕಾರವಲ್ಲ, ಮನಕ್ಕೊಪ್ಪಿಗೆಯಿಂದ. ಹೀಗೆ ಉತ್ಸವವು ನಡೆಯುತ್ತಿರುವಾಗ, ಅಲ್ಲಿಯ ದೊರೆ ಸೂರ್ಯದತ್ತನು ದಾರಿಯಲ್ಲಿ ಸಿಕ್ಕಿದ ಅಕಿಲಳ ರೂಪ, ಯೌವನಕ್ಕೆ ಮನಸೋತು ಕೂಡಿ ಸಂತೋಷಪಡುತ್ತಾನೆ. ಹಬ್ಬವು ಪೂರ್ಣ ಮುಗಿದು, ಮೊದಲಿನಂತೆಯೇ ಏಕ ಸ್ಥಿತಿಯಲ್ಲಿ ಜನರು ಮುಂದುವರಿಯುವಾಗ, ಕಾಂಭೋಜದಿಂದ ಬಂದ ಅಕಿಲಳು ತನ್ನೂರಿಗೆ ಪ್ರಯಾಣಿಸುತ್ತಾಳೆ. ಕೆಲವೇ ದಿನದಲ್ಲಿ ಅಕಿಲಳಿಗೆ ತನ್ನ ದೇಹದಲ್ಲಿ, ಆದ ಬದಲಾವಣೆ ತಿಳಿಯುತ್ತದೆ. ಇದನ್ನು ಯಾರಿಗೂ ತಿಳಿಯದಂತೆ, ಪರಿಹಾರಗೊಳಿಸುವ ಸಲುವಾಗಿ ಯೋಚಿಸಿ, ಅದೇ ವೃತ್ತಿಯಲ್ಲಿರುವ ಸಿಂಗಿಯ ಮನೆಗೆ ಹೊರಡುತ್ತಾಳೆ.

ಇತ್ತ ಸಿಂಗಿಯು ತನ್ನ ಮನೆಯಲ್ಲೇ ಇದ್ದು, ಬರುತ್ತಿರುವ ಅಕಿಲಳನ್ನು ನೋಡಿ, ತಾನಾಗಿ ಆಕೆಯಲ್ಲಿ ಪ್ರಶ್ನೆ ಮಾಡಿ, ತನ್ನ ನಿರ್ಧಾರ, ಗರ್ಭಪಾತವನ್ನು ಮುಕ್ತಾಯಗೊಳಿಸಿದ್ದೇನೆ. ನೀನು ಬಂದಿದ್ದು ವ್ಯರ್ಥವೆನ್ನುವಳು. ಆಗ ಈಕೆಯು ಯಾವುದೇ ರೀತಿಯಿಂದಲಾದರೂ, ತನ್ನ

ಮರ್ಯಾದೆ ಉಳಿಸಬೇಕೆಂದು ಬೇಡಿಕೊಳ್ಳುತ್ತಾಳೆ. ಆಗ ಸಿಂಗಿಯು ಹೆರಿಗೆಯ ಪೂರ್ವ ಕೆಲವು ದಿನ ಮೊದಲು, ನನ್ನಲ್ಲಿಗೆ ಬಂದು ಇದ್ದಲ್ಲಿ, ಯಾರೂ ಅರಿಯದಂತೆ ನಿನ್ನನ್ನು ಸಾಕಿ, ಕಾಲಕ್ಕೆ ಸರಿಯಾಗಿ ಹೆರಿಗೆ ಮಾಡಿಸಿ, ಆ ಮಗುವಿಗೂ ತಕ್ಕ ವ್ಯವಸ್ಥೆ ಮಾಡಿಸುತ್ತೇನೆ. ಇದಕ್ಕೊದಗುವ ಖರ್ಚು, ನೀನೇ ಭರಿಸಬೇಕೆಂದು ಕಳುಹಿಕೊಡುತ್ತಾಳೆ.

ಕಾಂಭೋಜದ ದೊರೆ ಚಿತ್ರಕೇತನನು ಒಂದು ದಿನ ಸಭೆಯನ್ನಿತ್ತು, ನಿತ್ಯದ ಕಾರ್ಯಕ್ರಮವನ್ನು ಮುಗಿಸಿ, ತನ್ನ ಸಾಂಸಾರಿಕ ವಿಚಾರವನ್ನು ಮನಸ್ಸಿನಲ್ಲಿ ತಿಳಿಯುತ್ತಾನೆ. ತಾನು ಮದುವೆಯಾಗಿ ಬಹಳ ವರ್ಷವೇ ಕಳೆದರೂ, ಕುಲೋದ್ಧಾರಕ ಮಕ್ಕಳು ಆಗಲಿಲ್ಲ! ಮುಂದೇನು ಎಂಥ ಚಿಂತಿಸಿ, ಮಂತ್ರಿಯಲ್ಲಿ ತಿಳಿದು, ಪುನಃ ಮತ್ತೊಬ್ಬಳನ್ನು ಮದುವೆಯಾಗಿ, ಸಂತಾನ ಪಡೆಯುವುದೇ ಸೂಕ್ತವೆಂತ ತೀರ್ಮಾನಿಸುವುದನ್ನು, ಮರೆಯಲ್ಲಿಯೇ ನಿಂತು ಕೇಳಿದ ಚಾರಕಿಯು, ಆ ವಿಚಾರವನ್ನು ರಾಣಿಯನ್ನು ಕಂಡು ಹೇಳುತ್ತಾಳೆ.

ಚಾರಕಿಯಿಂದ ವರ್ತಮಾನವನ್ನು ತಿಳಿದು , ರಾಣಿಯು ತನ್ನ ಪ್ರಾರಬ್ಧವನ್ನು ಹಳಿದು ದುಃಖಿಸುತ್ತಾಳೆ. ದುಃಖಿಸುವ ರಾಣಿಗೆ ಚಾರಕಿಯು ಸಮಾಧಾನಪಡಿಸಿ, ಮಕ್ಕಳನ್ನು ಪಡೆಯುವ ರಾಜನು, ಮರುಮದುವೆಯನ್ನು ತಪ್ಪಿಸುವ ಉಪಾಯವನ್ನು ತಿಳಿಸುತ್ತಾಳೆ. ಅದಕ್ಕೆ ರಾಣಿಯು ಸಮ್ಮತಿಸಿ, ಆಕೆಗೆ ದ್ರವ್ಯವನ್ನು ಕೊಟ್ಟು ಕಳುಹಿಸುತ್ತಾಳೆ. ಚಾರಕಿಯು ಅದೇ ಕಾಂಭೋಜದಲ್ಲಿ ಗರ್ಭಪಾತಾದಿ, ಸ್ತ್ರೀಯರ ಕಾಯಿಲೆಗೆ, ಮದ್ದು ಕೊಡುವುದಲ್ಲದೇ ಹೀಗೆ ಸೊರಗುವವರಿಗೆ ಮಕ್ಕಳನ್ನು ಒದಗಿಸಿ, ತಾನು ನಿರ್ದೋಷಿಯಂತ ಪ್ರಖ್ಯಾತಿಯಿಂದ ಮೆರೆಯುವವಳೆ ಸಿಂಗಕ್ಕ. ಇದಕ್ಕಿವಳೇ ಸಮರ್ಥಳೆಂದು ಚಾರಕಿಯು, ಸಿಂಗಿಯನ್ನು ಕಾಣಲು ಹೊರಡುತ್ತಾಳೆ.

ಇತ್ತ ಸಿಂಗಿಯು ತನ್ನ ಗ್ರಹದಲ್ಲಿ ಸ್ವಲ್ಪ ವೃದ್ಧಾಪ್ಯ ಸಮೀಪಿಸುತ್ತಿದ್ದದರಿಂದ, ಆ ಉದ್ಯೋಗದಲ್ಲಿ ಉತ್ಸಾಹಹೀನಳಾಗಿದ್ದು, ವೃತ್ತಿಯಿಂದಲೇ ನಿವೃತ್ತಿಯಾಗಬೇಕೆಂದು ಗೊಣಗುತ್ತ ಕುಳಿತಿರುವ ಅವಳೆಡೆಗೆ, ಚಾರಕಿಯು ಬರುತ್ತಾಳೆ. ವಿಷಯವನ್ನು ಸಂಕ್ಷೇಪವಾಗಿ ಚಾರಕಿ ಹೇಳಿದಾಗ, ಸಂಪೂರ್ಣವರಿತ ಸಿಂಗಿಯು, ರಾಣಿಯು ಇಂದೇ ಬಸುರಿಯಂತ ಪ್ರಚಾರ ಮಾಡಲಿ, ತಿಂಗಳೆರಡಾಗಿದೆಯಂತ ಸೂಚಿಸಿ, ತಕ್ಕ ಕಾಲದಲ್ಲಿ ಮಗುವನ್ನು ಕೊಡುವ ಭರವಸೆಯನ್ನು ಕೊಟ್ಟು ಕಳುಹುತ್ತಾಳೆ. ಪಟ್ಟಣದಲ್ಲಿ ರಾಣಿಯು ಬಸುರಿಯಂತ ಪ್ರಚಾರವಾಗುತ್ತದೆ. ಇತ್ತ ಸಿಂಗಿ ಗೃಹದಲ್ಲಿರುವ ಅಕಿಲಳಿರುವಾಗ, ಸಿಂಗಿಯ ಸಂಬಂಧಿ ಮಾಗಧದ ಸೇನಾನಾಯಕ ಸಿಂಗಿಯನ್ನು ಕಾಣಲು ಕಾಂಭೋಜಕ್ಕೆ ಬಂದು, ಅಲ್ಲಿ ಅಕಿಲಳನ್ನು ಬಯಸಿ ಗೋಗರೆಯುತ್ತಾನೆ. ಆಕೆಯು ಕೆಲವು ದಿನಗಳು ಕಳೆದ ನಂತರ ನಿನ್ನನ್ನು ಮದುವೆಯಾಗುವೆನೆಂದು ನಂಬಿಸುತ್ತಾಳೆ. ಹಾಗೆಯೇ ಆತ ಮರಳಿದ ನಂತರ, ಸಿಂಗಿಯ ಗೃಹದಲ್ಲಿ ಅಕಿಲಳು ಅವಳಿ-ಜವಳಿ ಮಕ್ಕಳನ್ನು ಹೆರುತ್ತಾಳೆ. ಒಂದು ಗಂಡು ಮಗು, ಆದರದು ಕುರುಡು. ಇನ್ನೊಂದು ಹೆಣ್ಣು ಮಗು. ಆ ಹೆಣ್ಣುಮಗುವೇ ರಾಣಿಯ ಕೈ ಸೇರುತ್ತದೆ.

ರಾಣಿಯು ಹೆಣ್ಣು ಮಗುವಿಗೆ ಜನ್ಮ ನೀಡಿದ್ದಾಳೆಯಂತ, ಆ ಪುರದಲ್ಲಿ ಬಹಳ

ಎಲ್ಲರೂ ನಲಿಯುತ್ತಾರೆ. ಆ ರಾಜನು ಮಗುವಿಗೆ ಆಗಬೇಕಾದ ಸಂಭ್ರಮದಿಂದ, ರಾಜ ಮೊದಲಾಗಿ ಸಂಸ್ಕಾರಗಳನ್ನು ಮಾಡಿಸಿ, ಮಗುವಿಗೆ ಮತಿಚತುರೆಯೆಂದು ನಾಮಕರಣವಾಗುತ್ತದೆ. ಇತ್ತ ಸಂಗಿಯು ಆ ಕುರುಡನಾದ ಮಗುವಿಗೆ, ಚತುರಮತಿಯೆಂತ ಕರೆಯುತ್ತ ಸಲಹುತ್ತಿರುತ್ತಾಳೆ.

ಹೀಗೆ ಕಾಲವು ಕಳೆದು, ಆ ತರುಣ-ತರುಣಿಯರು ಯೌವನಕ್ಕೆ ಕಾಲಿಡುವ ಕಾಲದಲ್ಲಿ ಮಾಗಧದ ಬೇವಿನಚರರು, ಕಾಂಭೋಜದ ಉಪವನದಿ ಗುರು-ಶಿಷ್ಯರಂತೆ ವೇಷ ಧರಿಸಿ, ಅಂತೆಯೇ ನಟನೆಯನ್ನು ಮಾಡುತ್ತಾ, ತಾವು ಕೇಳುವ ಧಾರ್ಮಿಕ ಪ್ರಶ್ನೆಗಳಿಗೆ ಉತ್ತರ ಕೊಡುವ ಸಮರ್ಥರಾರು? ಉತ್ತರ ಕೊಡಲಿಕ್ಕೆ ಸಾಧ್ಯವಾಗದಿದ್ದವರು ನಮ್ಮ ಶಿಷ್ಯರಾಗಿ ನಮ್ಮ ಜೊತೆಗೆ ಬರಬೇಕು. ನೀವು ಉತ್ತರಿಸಿದರೆ, ನಾನು ಸನ್ಯಾಸ ವೃತ್ತಿಯನ್ನೇ ತ್ಯಜಿಸಿ, ನಿಮ್ಮ ದಾಸನಾಗುತ್ತೇನೆ ಎಂದು ಹೇಳುತ್ತಿರುತ್ತಾರೆ. ಅವರ ಪ್ರಶ್ನೆಗೆ ಸಾಮಾನ್ಯರಿಗುತ್ತರಿಸಲಿಕ್ಕೆ ಸಾಧ್ಯವಾಗದಿರುವುದರಿಂದ, ದೂರು ಅರಮನೆಗೆ ಮುಟ್ಟುವುದು. ರಾಜನು ಬಹಳ ಮೇಧಾವಿಗಳೆಂದು ಅವರನ್ನು ಕಾಣಲಿಕ್ಕೆ, ತಾನು ತನ್ನ ಪರಿವಾರ ಸಮೇತ ಬಂದು, ಪಾದ ತೊಳೆಯುವ ಕಾಲದಲ್ಲಿ ರಾಜನ ಗುಂಪಿನಲ್ಲೇ ಇದ್ದ ಕುರುಡನು ಆಕ್ಷೇಪಿಸುತ್ತಾನೆ. ಗುರು-ಶಿಷ್ಯರಿಗೂ, ಕುರುಡನಿಗೂ ಪ್ರಶ್ನೋತ್ತರವಾಗಿ ಕುರುಡನೇ ಮೇಲೆನಿಸಿಕೊಂಡು, ಇವರು ಡಾಂಭಿಕರು, ವಂಚಕರು ಎಂತ ತಿಳಿಸಿದಾಗ, ಜನರು ಚಚ್ಚಿ ಹೊಡೆದಾಗ, ಗುರು-ಶಿಷ್ಯರದು ನಿಜ ಸ್ಥಿತಿ ಬಯಲಿಗೆ ಬರುತ್ತದೆ. ಚಾರಕರಿಗೆ ರಾಜ ಅವಮಾನಿಸಿದ್ದಲ್ಲದೇ, ಮಾಗಧಕ್ಕೆ ಅಪಮಾನದ ಮಾತುಗಳನ್ನಾಡುತ್ತಾ, ಊರ ಹೊರಗೆ ತಳ್ಳಿಸುತ್ತಾನೆ.

ಅವಮಾನಿತರಾದ ಚಾರಕರು, ಮಾಗಧನಲ್ಲಿ ಬಂದು ದೂರಿದಾಗ, ಸೇನೆಯನ್ನು ಕೂಡಿಕೊಂಡು ಕಾಂಭೋಜಕ್ಕೆ ತೆರಳಿ, ಯುದ್ಧದಲ್ಲಿ ಚಿತ್ರಸೇನನನ್ನು ಸೋಲಿಸಿ, ಕೈ ಸೆರೆ ಹಿಡಿದು, ಮಾಗಧನು ಚಿತ್ರಸೇನನಿಗೆ, ನಿನ್ನ ಕುಮಾರಿಯನ್ನು ಒಪ್ಪಿಸುವುದೊಂದು, ಆ ಕುರುಡನನ್ನು ನನ್ನ ಜೊತೆಯಲ್ಲಿ ಕಳುಹಿಸುವುದೊಂದು ಮತ್ತು ಪ್ರತಿ ವರ್ಷ ನಾವು ನಡೆಸುವ ಕಾಮನ ಹಬ್ಬಕ್ಕೆ ಬೇಕಾದ ಮದ್ಯವನ್ನು ಒದಗಿಸೆಂದು ಹೇಳುತ್ತಾನೆ. ಸೋತ ಚಿತ್ರಸೇನನು ಸುಮ್ಮನುಳಿದಾಗ, ಕುರುಡನೇ ಕೆಲವು ಮಾತುಗಳನ್ನಾಡಿ, ಮಾಗಧಕ್ಕೆ ಬರಲು ಸಿದ್ಧನೆಂದು ಸೇನೆಯ ಜೊತೆಯಲ್ಲೇ ಮತಿಚತುರೆ, ಚತುರಮತಿ ಹೊರಡುತ್ತಾರೆ. ಮಾಗಧಕ್ಕೆ ಬಂದು ಸೂರ್ಯದತ್ತನು ತನಗೆ ಮುದಿತನ ಬಂದಿರುವುದರಿಂದ, ತನ್ನ ತಂಗಿಯ ಮಗನಿಗೆ ಪ್ರಜೆಗಳ ಮನವೊಲಿಸಿ, ಯುವರಾಜಾಭಿಷೇಕವನ್ನು ಮಾಡಿಸಿ, ಮತಿಚತುರೆಯನ್ನು ಮದುವೆ ಮಾಡಿಸುತ್ತಾನೆ.

ಹೀಗೆಯೇ ಕೆಲವು ವರ್ಷಗಳು ಕಳೆಯುತ್ತಿರುತ್ತದೆ. ಮತಿಚತುರೆಯ ಗಂಡ ಸ್ತ್ರೀಯ ಖಯಾಲಿಯೇ ಇಲ್ಲದವನಾಗಿದ್ದು, ಒಂದು ರೀತಿ ಜಡಭರಿತನೆಯಾಗಿರುತ್ತ, ಯಾವುದರಲ್ಲಿಯೂ ಉತ್ಸಾಹವಿಲ್ಲದ ಬರಡು ಮನುಷ್ಯ. ಆತನೊಡನೆ ಮತಿಚತುರೆಯು ಹಲವು ವರ್ಷಗಳು ಕಳೆದರೂ, ತನ್ನ ಗಂಡನ ಪರಿಸ್ಥಿತಿಯನ್ನು ಇನ್ನೊಬ್ಬರಿಗೆ ತಿಳಿಸದೆ, ವಿಷಯವನ್ನು ಅರ್ಥೈಸಿಕೊಂಡು, ಮನದ ದುಃಖವನ್ನು ಹುದುಗಿಟ್ಟು ಬಹಿರಂಗದಲ್ಲಿ ಸಂತೋಷಿಯಾಗಿ ನಟಿಸುತ್ತಿರುತ್ತಾಳೆ. ಕೆಲವು ದಿನದಲ್ಲಿ ವರ್ಷಂಪ್ರತಿ ನಡೆಯುವ, ಹೋಳಿ ಹಬ್ಬವು ನಿರ್ಣಯವಾಗಿ, ಎಂದಿನಂತೆ ನಡೆಯುತ್ತಿರುವಲ್ಲಿ,

ಇದೇ ಶುಭ ಸಮಯವೆಂದು ತಿಳಿದು, ಮತಿಚತುರೆಯು ಸ್ಪುರದ್ರೂಪಿಯಾದ ಪುರುಷನನ್ನು ಕೂಡಿ ಗರ್ಭ ಧರಿಸುತ್ತಾಳೆ. ಹೀಗೆ ಹೋಳಿಯ ಸಮಯದಲ್ಲೇ ಗರ್ಭವತಿಯಾದ ಮತಿಚತುರೆಯ ಬಗ್ಗೆ ಜನರು ಗುಸು ಗುಸು ಆಡಿಕೊಳ್ಳುವುದು, ಹಳೆಯ ರಾಜನಿಗೆ ತಿಳಿಯುತ್ತದೆ. ರಾಜನು ಆಕೆಯನ್ನು ಕರೆಸಿ, ವಿಚಾರಿಸಿ, ಹಿಂಸಿಸುವಾಗ ಚತುರಮತಿಯು ಅಲ್ಲಿಗೆ ಬಂದು, ಮತಿಚತುರೆಯ ಬಗ್ಗೆ ವಾದಿಸಿ, ಹೋಳಿ ಹಬ್ಬದ ಪರಿ; ಯಾರು ಯಾರನ್ನೇ, ಆ ಸೀಮಿತ ಸಮಯದಲ್ಲಿ ಅನ್ಯರನ್ನೇ ಕೂಡಿದ್ದರೂ, ಯಾರಿಗೂ ಕೇಳುವ ನೈತಿಕ ಹಕ್ಕಿಲ್ಲ. ಕೂಡುವುದು ಸರಿ, ಬಸುರಿಯಾದದ್ದು ಸರಿಯಲ್ಲವೆನ್ನುವುದು ಹಾಸ್ಯಾಸ್ಪದ. ಕುರುಡನ ವಾಕ್ ವೈಖರಿಯಿಂದ, ಆ ಮುಂದು ಕಾಮನ ಉತ್ಸವವನ್ನು ನಿಲ್ಲಿಸುತ್ತಾನೆ. ಕಾಲದಂತೆ ಮತಿಚತುರೆಯು ಒಂದು ಹೆಣ್ಣು ಮಗುವಿಗೆ ಜನ್ಮ ಕೊಡುತ್ತಾಳೆ.

ಇತ್ತ ನೇಪಾಳದ ಅರಸು ಒಂದು ದಿನ ಸಭೆಯನ್ನು ಸೇರಿಸಿ, ಅಗತ್ಯ ಕಾರ್ಯವನ್ನು ಮುಗಿಸಿ, ಮನಸ್ಸಿನ ಬೇಸರವನ್ನು ಕಳೆಯುವ ಸಲುವಾಗಿ, ಸ್ನೇಹಿತನೊಂದಿಗೆ ವಿಹಾರ ಮತ್ತು ತಂದೆಯ ತಂಗಿಯ ಮಗ ಸೂರ್ಯದತ್ತನನ್ನು ಕಂಡು ಬರುವುದೆಂದು ನಿರ್ಣಯಿಸಿ, ಹೊರಟು ಬರುತ್ತಿರುತ್ತಾನೆ. ಹೀಗೆ ಹಲವು ಪ್ರೇಕ್ಷಣೀಯ ಸ್ಥಳವನ್ನು ನೋಡಿ ಮುಂದುವರಿಯುತ್ತಾನೆ. ಹೀಗೆ ಬರುತ್ತಿರುವಲ್ಲಿ ಇತ್ತ ಚತುರಮತಿಯು, ತನಗೆ ರಾಜನು ಕೊಡುವ ಪಡಿಯನ್ನು ಪಡೆಯುವರೆ, ಅರಮನೆಯ ಕಡೆ ಒಂದು ಹುಡುಗನ ಸಹಾಯದಿಂದ ಬರುತ್ತಿರುತ್ತಾನೆ. ದಾರಿಯಲ್ಲಿ ಒಂದು ಮಾವಿನ ತೋಟವು ಕಾಣುವುದು. ಆ ಹುಡುಗ ಕುರುಡನನ್ನು ದಾರಿಯಲ್ಲೇ ನಿಲ್ಲಿಸಿ, ಮಾವಿನ ಕಾಯಿಯ ಅಪೇಕ್ಷೆಯಿಂದ ತೋಟಕ್ಕೆ ತೆರಳುವಾಗ, ಕುರುಡನು ಹುಡುಗನಿಗೆ ಮಾವಿನ ಕಾಯಿ ಸಿಗಲಾರದು ಎಂದು ಹೇಳಿದರು. ಆ ಹುಡುಗ ತೋಪಿಗೆ ತೆರಳಿ, ವಾಪಾಸ್ಸು ಬಂದು, ಕುರುಡನಲ್ಲಿ ಇಷ್ಟು ದೊಡ್ಡ ತೋಟವಾದರೂ, ಒಂದೇ ಒಂದು ಹೂ, ಹೂವಿನ ಮಿಜಿರು, ಮಿಡಿ, ಕಾಯಿ, ಹಣ್ಣು ಇಲ್ಲ ವೆನ್ನುವನು. ಈ ತರ್ಕವನ್ನು ಕೇಳಿದ ಮೈನಾಂಕನಿಗೆ, ಆಶ್ಚರ್ಯವಾಗಿ, ಕುರುಡನಲ್ಲಿ ನೀನು ಯಾರು? ಎಲ್ಲಿಗೆ ತೆರಳುವುದು? ನಿನ್ನ ಹೆಸರೇನು? ಪೂರ್ಣ ತಿಳಿಸು ಎನ್ನುವನು. ಚತುರಮತಿಯು ತನ್ನ ವಿಚಾರವನ್ನು ತಿಳಿಸಿ, ಈಗ ನಾನು ಅರಮನೆಯ ಉಗ್ರಾಣಕ್ಕೆ ಹೋಗುವುದು. ಅಲ್ಲಿಯ ಅಧಿಕಾರಿಗಳು ರಾಜಾಜ್ಞೆಯಿಂದ ನನಗೆ ಒಂದು ಸೇರು ಅಕ್ಕಿ ಮತ್ತು ತಿಂಗಳಿಗೆ ಒಂದು ವರಹ ಹೊನ್ನು ಕೊಡುತ್ತಾರೆ. ಅದರಲ್ಲಿ ಅರ್ಧ ಈ ಬಾಲಕನಿಗೆ ಕೊಡುತ್ತೇನೆ. ಈತ ನನಗೆ ಸಹಾಯ ಮಾಡುವುದರಿಂದ. ವಿಚಾರವನ್ನು ಕೇಳಿದ ರಾಜ, ತಾನು ನಿನ್ನ ರಾಜ ಕೊಟ್ಟದ್ದರಿಂದಿಮ್ಮಡಿ ಕೊಡುತ್ತೇನೆ. ನನ್ನ ರಾಜಧಾನಿಗೆ ನೀನು ಬರುವುದಾದರೆ ಎಂದು ಹೇಳುತ್ತಾನೆ. ಅದಕ್ಕೆ ಕುರುಡನು ಒಪ್ಪಿಗೆಯನ್ನು ಕೊಟ್ಟ ಕಾರಣ, ಸ್ನೇಹಿತನ ಮುಖೇನ, ಕುರುಡನನ್ನು ನೇಪಾಳಕ್ಕೆ ಕಳುಹಿಸುತ್ತಾನೆ. ತಾನು ಮಾಗಧಕ್ಕೆ ಬಂದು, ಸೂರ್ಯದತ್ತನನ್ನು ಕಂಡು, ಯೋಗಕ್ಷೇಮದ ವಿಚಾರದ ನಂತರ, ಅಲ್ಲಿಯೇ ರಾಜನ ಆತಿಥ್ಯದಿಂದ ಉಳಿಯುತ್ತಾನೆ. ಹೀಗಿರುವಾಗ ಮತಿಚತುರತೆಯ ಮಗಳು, ಪ್ರಾಯದ ಹೊಸ್ತಿಲ ಹತ್ತಿರವಿರುವವಳನ್ನು ನೋಡಿ ಭ್ರಮಿಸಿ, ತನ್ನವಳಾದರೆ ಆಗಬಹುದೆಂದು ತಿಳಿದು, ತನ್ನ ಊರಿಗೆ ಬರುತ್ತಾನೆ.

ಕುರುಡನಿಗೆ ಕೊಟ್ಟಮಾತಿನಂತೆ, ಪ್ರತಿದಿನ ಆತನಿಗೆ ಎರಡು ಹೊತ್ತಿನ ಪಡಿಯನ್ನು ಕೊಡುತ್ತಾ ಬರುತ್ತಿರುವಲ್ಲಿ, ಒಂದು ದಿನ ಒಬ್ಬ ಅರೇಬಿಯವನು ಬಂದು, ಒಂದು ಉತ್ತಮ ಲಕ್ಷಣದ ಕುದುರೆಯನ್ನು ಮಾರುವ ಸಲುವಾಗಿ, ನೇಪಾಳಕ್ಕೆ ತಂದು, ಪ್ರಚಾರ ಮಾಡುತ್ತಾನೆ. ಈ ಸುದ್ದಿಯು ರಾಜನಿಗೆ ಮುಟ್ಟಿ ಕುದುರೆ ಸಮೇತ ಅರೇಬಿಯವನನ್ನು ಕರೆಸಿ, ವಿಚಾರಿಸಿ, ಕುದುರೆಯ ಪರೀಕ್ಷೆ ಕುರುಡನಿಂದ ನಡೆದು, ಕುದುರೆಯ ಲಕ್ಷಣವನ್ನು ಕುರುಡನು ತಿಳಿಸುತ್ತಾನೆ. ಆದರೂ ಲಕ್ಷಣಭರಿತ ಕುದುರೆಯಂತ, ಹೇಳಿರುವುದರಿಂದ ಕುದುರೆಯ ಕ್ರಯವನ್ನು ಕೊಟ್ಟು, ಕುದುರೆಯನ್ನು ಖರೀದಿಸುತ್ತಾನೆ. ಆ ಕುದುರೆಯ ಮೂಲವನ್ನು ತಿಳಿಯಲಿಕ್ಕೆ, ಚಾರಕನನ್ನು ಕಳುಹಿಸುತ್ತಾನೆ. ಕುದುರೆಯ ವರ್ತಮಾನ ಚಾರಕರ ಮುಖೇನ ಅರಿತು ಸಂತೋಷದಲ್ಲಿರುತ್ತಾನೆ.

ಸೂರ್ಯದತ್ತನು ಮತಿಚತುರತೆಯ ಮಗಳನ್ನು, ಮೈನಾಂಕನಿಗೆ ಕೊಟ್ಟು ಮದುವೆ ಮಾಡುವ ನಿರ್ಧಾರವನ್ನು ಮಾಡಿ, ನೇಪಾಳಕ್ಕೆ ವರ್ತಮಾನವನ್ನು ಕಳುಹಿಸಿಕೊಡುತ್ತಾನೆ. ಪುನಃ ಮೈನಾಂಕನು ಹುಡುಗಿಯನ್ನು ಪರೀಕ್ಷಿಸುವ ಸಲುವಾಗಿ, ಹುಡುಗಿಯನ್ನೇ ತನ್ನ ಮನೆಗೆ ಕಳುಹಿರೆಂದು ಹೇಳಿ ಕಳುಹಿಸುತ್ತಾನೆ. ಆ ಪ್ರಕಾರ ಬಂದ ಮತಿಚತುರೆ ಮತ್ತು ಆಕೆಯ ಮಗಳನ್ನು ಗೌರವದಿಂದ ಕಂಡು, ಹುಟ್ಟು ಕುರುಡನಲ್ಲಿ ಹುಡುಗಿಯ ಪರೀಕ್ಷೆಗೆ ಕಳುಹಿಸುತ್ತಾನೆ. ಪರೀಕ್ಷಿಸಿದ ಕುರುಡ, ಹುಡುಗಿಯು ಸುಲಕ್ಷಣದಲ್ಲಿರುತ್ತಾಳೆ. ಇವಳ ಗರ್ಭದಲ್ಲಿ ರತ್ನದೋಪರಿ ಪುತ್ರಿಯ ಜನನವಾಗುವುದು. ಆ ಮೂಲಕ ಸುಮನಸರ ದರ್ಶನವಾಗುವುದು. ಆದರೂ ಈ ಹುಡುಗಿ, ಹುಡುಗಿಯ ತಾಯಿಯು ಹಾದರದಲ್ಲಿ ಹುಟ್ಟಿರುತ್ತಾರೆ ಎಂದು ರಾಜನಿಗೆ ವರದಿ ಒಪ್ಪಿಸುತ್ತಾನೆ.

ಕುರುಡನೆಂದ ರೀತಿಯನ್ನು ತಿಳಿದು, ಹುಡುಗಿಯು ಹಾದರದ್ದಾದರೂ ಸುಲಕ್ಷಣೆಯೆಂತಾದ ಮೇಲೆ; ಮದುವೆಯಾಗುವುದಾಗಿ ತೀರ್ಮಾನಿಸಿ, ತಾಯಿ ಮಗಳನ್ನು ಹಿಂದೆ ಕಳುಹಿಸುತ್ತಾನೆ. ತನ್ನ ಆತ್ಮ ಸ್ನೇಹಿತನನ್ನು ಆ ಹುಡುಗಿಯ ತಾಯಿಯ ಮೂಲ ತಿಳಿಯಲಿಕ್ಕೆ ಕಳುಹಿಸುತ್ತಾನೆ. ಆತನಾದರೂ ಸ್ತ್ರೀ ವೇಷವನ್ನು ಧರಿಸಿ, ಕಾಂಭೋಜಕ್ಕೆ ಬಂದು, ರಾಜ ನರ್ತಕಿಯ ಗೃಹದಲ್ಲಿದ್ದು, ಆ ಹುಡುಗಿಯ ಅಜ್ಜಿಯ ಕಥೆಯನ್ನು ತಿಳಿದು, ರಾಜ ನರ್ತಕಿಯನ್ನು ಕರೆದುಕೊಂಡು ನೇಪಾಳಕ್ಕೆ ಬಂದು, ರಾಜನಿಗೆ ವರದಿ ಸಲ್ಲಿಸುತ್ತಾನೆ. ಮೈನಾಂಕನು ರಾಜನರ್ತಕಿಗೂ ಆತನಿಗೂ ಮದುವೆಯನ್ನು ಮಾಡಿಸಿ, ಕುರುಡನಾದರೂ ಆತನ ಅನುಭವಕ್ಕೆ ಮನಸೋತು, ತನ್ನ ಹುಟ್ಟಿನ ಗುಟ್ಟನ್ನು ತಿಳಿಯುವ ಸಲುವಾಗಿ, ಕುರುಡನನ್ನು ಏಕಾಂತಕ್ಕೆ ಕರೆದು ಮನಸ್ಸಿನ ಪರಿಯನ್ನು ಕೇಳುತ್ತಾನೆ. ಕುರುಡನು ವಿಚಾರವನ್ನು ಮಥಿಸಿ; ನೀನು ಶ್ರೇಷ್ಠಿಯ ಮಗನೆಂದು ತಿಳಿಸುತ್ತಾನೆ. ಆ ನಿಜವನ್ನು ತಾಯಿಯಿಂದ ತಿಳಿದು, ಹುಟ್ಟು ಕುರುಡನಾದ ನೀನು ಇದನ್ನೆಲ್ಲಾ ತಿಳಿಸಿದ ಮರ್ಮವೇನೆಂದು ಕೇಳಿದ ರಾಜನಿಗೆ, ಆ ಗುಟ್ಟನ್ನು ತಿಳಿಸುತ್ತಾನೆ.

ಹೀಗೆ ಕೆಲವು ಕಾಲ ಕಳೆದ ನಂತರ, ಮೈನಾಂಕನ ಹೆಂಡತಿ ಗುಣವಂತೆಯೂ ಹೆಣ್ಣುಮಗುವಿಗೆ ಜನ್ಮವನ್ನು ಕೊಡುತ್ತಾಳೆ. ಅಮರದರ್ಶಿನಿಯೆಂದು ಹೆಸರಿಟ್ಟು, ದೇವತೆಯ ದರ್ಶನದ ನಿರೀಕ್ಷೆಯಲ್ಲಿ ಮೈನಾಂಕನಿರುತ್ತಾನೆ.

ಏಕಧಂಡ ಮುನಿಯ ಮಡದಿ ಶ್ರೀರಮೆಯು, ತನ್ನ ಗಂಡನ ಶಿಷ್ಯನಲ್ಲಿ ಅಶ್ಲೀಲ ಚೇಷ್ಟೆಯನ್ನು ತೋರಿಸುತ್ತಾ; ನಲಿಯುತ್ತಿರುವುದನ್ನು ಗಮನಿಸಿದ ಮುನಿಯು, ರಕ್ಕಸಿಯಾಗೆಂದು ಶಾಪವನ್ನು ಕೊಡುತ್ತಾನೆ. ಶಾಪದ ಪರಿ; ಪುರುಷದ್ವೇಷಿ ಸ್ತ್ರೀಯರಿಂದಲೇ ಕಾಮತೃಪ್ತಿಯನ್ನು ಪಡೆಯುವ ಹವಣಿಕೆ. ಆಕೆಯು ಕ್ಷಮೆ ಯಾಚಿಸಿದಾಗ, ನನ್ನಿಂದ ವಿದ್ಯೆ ಕಲಿತ ಶಿಷ್ಯನಿಂದ ಶಾಪ ವಿಮೋಚನೆಯೆನ್ನುವನು. ಅವಳು ರಕ್ಕಸಿಯಾಗಿ ಬಹಳ ಭಯವನ್ನು ತೋರುತ್ತಾ, ಕೆಲವು ಸ್ತ್ರೀಯರನ್ನು ಹಿಡಿದು, ಅಪ್ಪಿ ಮುದ್ದಾಡುತ್ತಾ ತನ್ನ ಗುಹೆಯಲ್ಲಿರಿಸಿಕೊಂಡಿರುತ್ತಾಳೆ. ರಕ್ಕಸಿಯಿಂದ ಮೂರು ಲೋಕಕ್ಕೂ ಉಪದ್ರವುಂಟಾಗುವುದು.

ಕಾಶ್ಮೀರದ ಅರಸು ನವಯುವಕ ಇಂದುಶರ್ಮ ಬೇಟೆಗೆಂದು ಬಂದು, ಬೇಟೆಯಾಡಿ ಹಿಂದಿರುಗುವಾಗ, ಪ್ರಕೃತಿಯ ವಿಕೋಪಕ್ಕೆ ಸಿಲುಕಿ, ಬಹಳ ಕಷ್ಟಪಟ್ಟು ಪ್ರಜ್ಞಾಹೀನನಾಗಿ ಒಂದೆಡೆ ಬೀಳುತ್ತಾನೆ. ಹೀಗೆ ಬಿದ್ದಿರುವ ಇಂದುಶರ್ಮನನ್ನು; ಏಕಧಂಡ ಮುನಿಯು ಕರೆದುತಂದು ಶೈತ್ಯೋಪಚಾರದಿಂದ ಸಲಹುವುದರೊಂದಿಗೆ, ಆತನಿಗೆ ಹಲವು ತರಹದ ವಿದ್ಯೆಯನ್ನು ಬೋಧಿಸುತ್ತಿರುತ್ತಾನೆ.

ಇತ್ತ ರಕ್ಕಸಿಯ ಉಪದ್ರವವನ್ನು ತಡೆಯಲಾಗದೆ, ಜನರು ಬೊಬ್ಬೆ ಹೊಡೆಯುತ್ತಾರೆ. ರಾತ್ರಿಯಾಗುವುದರೊಳಗೆ ಎಲ್ಲರೂ ಮನೆಯನ್ನು ಸೇರಿಕೊಳ್ಳುತ್ತಾರೆ. ಅತ್ತ ಸುರಪುರದಲ್ಲಿಯೂ ಇದೇ ರೀತಿಯ ಭಯದಿಂದ, ಸರ್ವರೂ ನಡುಗಿ ದೇವೇಂದ್ರನಲ್ಲಿ ದೂರುತ್ತಾರೆ. ದೇವೇಂದ್ರನು ಈ ಸಕಲ ವಿಚಾರವನ್ನು ತಿಳಿದು, ನೇಪಾಳಕ್ಕೆ ಬಂದು, ರಾಜನನ್ನು ಕಂಡು, ರಕ್ಕಸಿಯನ್ನು ಕೊಂದು, ಹೆಣವನ್ನು ತೋರಿಸಿದವರಿಗೆ ಮಗಳನ್ನು ಕೊಡುವುದೆಂದು ಡಂಗುರ ಸಾರುವಂತೆ ಹೇಳಿ ಹಿಂದೆ ತೆರಳುತ್ತಾನೆ.

ಅಂತೆಯೇ ಆ ಊರಿನಲ್ಲಿ ಡಂಗುರವನ್ನು ಸಾರುತ್ತಾರೆ. ಇತ್ತ ಮುನಿಯಿಂದ ವಿದ್ಯೆಯನ್ನು ತಿಳಿದು, ಅಪ್ಪಣೆಯನ್ನು ಪಡೆದು ಹಿಂದಿರುಗುವಾಗ, ಕಾಶ್ಮೀರಕ್ಕೆ ಬಂದು ಅಲ್ಲಿಯ ವಿಶೇಷವನ್ನು ತಿಳಿದು, ರಕ್ಕಸಿಯನ್ನು ಕೊಂದು, ಅಮರದರ್ಶಿನಿಯನ್ನು ಮದುವೆಯಾಗಿ ಸುಖದಿಂದ ರಾಜ್ಯಭಾರ ಮಾಡುತ್ತಾನೆ.

॥ಶ್ರೀ ಓಂ ನಮೋ ಭಗವತೇ ವಾಸುದೇವಾಯ ನಮಃ॥

ಭಾಮಿನಿ

ವಂದಿಸುತ ಗಣಪತಿಗೆ ವಾಣಿಗೆ। ನಿಂದು ಕರಗಳ ಮುಗಿದು ಹರಿಗಾ। ನಂದದಲಿ ಕರ ಮುಗಿಯುತಿಂದು ಶೇಖರನ॥ ಒಂದೆ ಮನದಲಿ ಸ್ತುತಿಸಿ ವ್ಯಾಸರ। ಅಂದದಲಿ ಸುರಪಾದಿ ದಿವಿಜರ। ಮುಂದೆ ತಲೆಯನು ಮಣಿದು ವರೆವೆ ಈ ಕಥಾಮೃತವ ॥೧॥

ಸೌರಾಷ್ಟ್ರ ತ್ರಿವುಡೆ ತಾಳ

ಒಂದು ದಿನ ತಾ ಮಗಧ ಭೂಮಿಪ। ಚಂದದಿಂದಲಿ ಪೀಠವೇರುತ। ಮಂದಿ ಪ್ರಜೆಗಳ ಕುಶಲ ತಿಳಿಯುತ। ಮುಂದಕವನು॥೧॥ ಸೂರ್ಯದತ್ತನು ಯಂದು ಯನ್ನನು। ಧಾರಿಣಿಯೊಳ್ ಕರೆಯುತಿರುವರು। ಪೂರ್ವದಿಂದಲಿ ಯನ್ನ ಪಿತನಿದ। ನೇರ್ದ ಪೀಠ ॥೨॥ ಬಂತು ಯನಗಾ ಪರಿಯೊಳಿಂದಕೆ। ಚಿಂತಿಸುವ ಯಾಕಜ್ಜ ವಿರದದು। ಕಂತು ಜನಕನ ಕರುಣದೊಳಗಿದು। ಇಂತುಯೋಗ ॥೩॥ ವರುಷ ವರುಷವು ನಡೆದು ಬರುತಿಹ। ಹಿರಿದು ಕಾಮನ ವುತ್ಸವವ ನಾ। ಚರಿಸಬೇಕದ ಕಾಲ ವದಗಿದೆ। ಮರಳಿ ಯೋಗ॥೪॥

ಭಾಮಿನಿ

ಉತ್ಸವವ ನಾ ಬಿಡದೆ ಚರಿಸುವ। ಉತ್ಸವವದೀ ಹೋಳಿ ಹುಣ್ಣಿಮೆ। ಭ್ರತ್ಯ ಧನಿಯವ ಸತಿಯ ಪತಿಯರು ಬೇಧ ತೊರೆಯುತಲಿ॥ ಮತ್ತಿನಲಿ ಯದು ನಲಿವ ಹಬ್ಬವು। ಮತ್ತೆ ನಡೆಸುವೆನೆಂದು ತನ್ನಯ। ಪ್ರಥ್ವಿಯೊಳು ಡಂಗುರವ ಸಾರಿದ ಭೃತ್ಯರೂಢನಂದು॥೧॥

ಕಾಂಭೋಜಿ ಝಂಪೆ ತಾಳ

ಇತ್ತಲೀ ಪರಿಯಿಂದ ಮಗಧದದಿಪ ನಿರುತಿರಲು। ಅತ್ತಲಾ ಕಾಂಭೋಜ ಪುರದಿ। ಹೆತ್ತ ತಾಯಿ ತಂದೆಯರ ಶಿಶುತನದಿ ಕಳಕೊಂಡ। ಮತ್ತ ಕಾಶಿನಿಯಕೀಳಲಂದು ॥೧॥ ಇರುತಿರಲು ತಾ ಮಾತಾ ಮಹಿರಕ್ಷೆಯೊಳಾ ವಾರ್ತೆ। ಅರಿಯು ತಾ ಕ್ಷಣದೊಳಗೆ ತಿಳಿದು। ಕಿರಿ ಯಮ್ಮನಿಹಳಲ್ಲಿ ತೆರಳಿ ನಾನವಳೆಡೆಗೆ। ಭರಿತದಾ ವುತ್ಸವದಿ ಮೆರೆದು॥೨॥ ಬರುವೆನೆನ್ನುತ ಲಾಕೆ ಅಜ್ಜಿಯ ನೊಡಗೊಂಡು। ಬರದಿಂದ ಮಗಧಕ್ಕೆ ಬಂದು। ಹರುಷದಿಂದುತ್ಸವದಿ ಪಾಲ್ಗೊಂಡು ನಲಿಯುತಿರೆ। ಧರಣಿಯೊಳ್ ಗಿರುತಿರಲಿಕಂದು ॥೩॥

ವಾರ್ದಿಕ

ಪುರಜನರೆಲ್ಲರಂ ನವ ಉಡಿಗೆ ತೊಡಿಗೆಯಿಂ। ಸ್ಮರನ ಮಂಟಪ ಸೇರ್ದು ಕಾಮನಂ ನೇಮದಿಂ। ಪರಿ ಪರಿಯ ವಿಧದಿಂದ ಅರ್ಚಿಸುತ ಮೆಚ್ಚಿಸುತ ಕಾಡಿದರು ಬೇಡಿದರು ಹಿರಿ ಕಿರಿಯ ರೊಂದೆ ಸಯಲಿ। ನರರ ಕಟ್ಟಲೆ ಮೀರಿ ಮಾಂಸವಂ ಮದ್ಯವಂ। ಹರುಷದಿಂದಾಗಲ್ಲಿ ಭಕ್ಷಿಸುತ ವೀಕ್ಷಿಸುತ। ಸ್ಥಿರವ ತಪ್ಪುತಲಂದು ಪುರುಷರಾ ನಾರಿಯರು ಸ್ಮರ ರುಚಿಯೊಳು ದಣಿದರು ॥೧॥

ಕಲ್ಯಾಣಿ ಆದಿತಾಳ

ಪುರುಷರು ನಾರಿಯರು। ಲಜ್ಜೆಯ। ತೊರೆಯುತಲಲ್ಲಿಹರು। ಪರಿ ಪರಿ ವಿಧದಲಿ। ಇರುತಿರೆ ಚೇಷ್ಟೆಯೊಳ್। ಧರಣಿಪ ನಖಿಲಳ। ಪರಿಕಿಸುತಾ ಕ್ಷಣ ॥೧॥ ನೋಡಿದ ನೃಪವರನು। ಅಖಿಲಳಾ। ದೂಡಿದ ಲಜ್ಜೆಯನು। ಕೂಡುತಲವಳ ಈ। ಡಾಡಿದ ಮಾರನ। ಚೇಡಿಸಿ ನಲಿವೆನು। ರೂಢಿಯಳೆನ್ನುತ॥೨॥ ಕಣ್ಣನು ಮಿಟುಕಿಸಲು । ನೃಪವರ। ಮಿಣ್ಣನೇ ಪರಿಕಿಸಲು। ಎನ್ನನೆ ಕರೆವುದು। ಸನ್ನೆಯೊಳೆನುತಲಿ। ಮಿಣ್ಣನೆ ಬಂದಳು । ಕನ್ನೆಯ ದೊರ್ವಳೆ ॥೩॥ ಕ್ಷಣಿಕದ ಸುಖಕಂದು । ಮಾರಿದಳ್। ಮಾನವನವಳ್ ಮುಂದು । ಕ್ಷೋಣಿಪ ನೊಡನಾ । ಜ್ಞಾನದಿ ಕೂಡುತ । ಜಾಣೆಯು ಭಯದಲಿ। ಮಾನದ ಪರಿಗಾ॥೪॥

ಭಾಮಿನಿ

ಸುರತ ಕ್ರೀಡೆಯೊಳಂದು ನೃಪವರಾ । ತರುಣಿ ಮಣಿಯನು ರಮಿಸುತಿರಲಾ । ತರುಣಿ ಭಯದಲಿ ನಯನ ವಂದನು ಮುಚ್ಚುತಾ ಗಂದು ॥ ಭರಿತ ದುತ್ಸಾಹದಿಂದ ಕಳೆಯಲು । ಸರಿದು ಪೂರ್ಣಿಮೆ ಮತ್ತೆ ವಿಧಿಯಲಿ। ಪುರುಷ ಸ್ತ್ರೀಯ ದಿರಲಿಕಲ್ಲಿಯೇ ಮರಳಿದಳು ವನಿತೆ ॥೧॥

ಸಾಂಗತ್ಯ ರೂಪಕ ತಾಳ

ತರಣಿ ತಾ ನರಿತಳು ದಿನ ದಿನದಲಿ ತನ್ನ। ಪರಿಯೊಳ್ ಗುದರದ ಸ್ಥಿತಿಯ । ಧರಿಸಿದೆ ಗರ್ಭವ ಇರದು ತಾ ಮಾನವು । ಪರಿಯು ತಾ ಮುಂದಕ್ಕೆಂತೊ ॥ ೧॥ ಅಲ್ಪ ಸುಖಕ್ಕಾಗಿ ಇಪ್ಪ ಮಾನ ಹೋಯ್ತು। ಬೆಪ್ಪಳೆ ತಾನಾದೆನೆಂದು । ಇಪ್ಪ ಪರಿ ಮುಂದೆಂತು । ಒಪ್ಪರು ಜನರೆನ್ನ। ತಪ್ಪು ಮಾಡಿದೆ ತಾ ನಂದು ॥೨॥ ಪರಿ ಪರಿ ಬೇನೆಗೆ ಮದ್ದನು ಕೊಡುತಿಹ । ತರುಣಿ ಸಿಂಗಿ ಬಳಿ ಸಾರಿ । ಧರಿಸಿದ ಗರ್ಭವ ನಿಳುಹಿಸಿ ಕೊಂಬೆನ್ಂ । ದಿರದಿ ಯೋಚಿಸಿ ಬರುತಿರಲು ॥೩॥ ತೆರಳಿ ತಾನವಳೆಡೆ ಯನ್ನುತ ಬರುತಿರೆ। ಇರುವಳಾ ಸಿಂಗಿಯು ಗೃಹದಿ। ಬರುವ ಮುಪ್ಪನಗ್ರಹಿಸಿ ಹರ ಹರ ವೆನ್ನುತ। ಇರುತಿರೆ ವೈರಾಗ್ಯದಿಂದ ॥೪॥

ಕೆದಾರ ಗೌಳ ಅಷ್ಟತಾಳ

ಸಿಂಗಕ್ಕ ನೆಂಬುವ ಭೃಮರ ಕುಂತಲೆಯಲ್ಲಿ। ಭಂಗದ ರುಜಿನವ ಕಳೆಯೆ। ರಂಗಿನೊಳೌಷದ ಕೊಡುತಲಿ ಜೀವನ। ಭಂಗದಿ ಕಳೆಯುತ್ತಲಿರಲು ॥೧॥ ದಿಟ್ಟತನದಲಿ ನಡೆವ ಕೆಟ್ಟ ಸ್ತ್ರೀಯರು ಅಲ್ಲಿ। ಗುಟ್ಟಿನಿಂದಲಿ ಬರುತ ಮತ್ತೆ। ನಷ್ಟವೋ ಲಾಭವು ಹುಟ್ಟಿದ ಶಿಶು ತೊರೆದು। ತಟ್ಟನೆ ಪೋಗುತಲಿಹರು॥೨॥ ಇನಿತಲ್ಲಿ ಸಿಂಗಕ್ಕ ಜಂಭದೊಳಿರುತಿರೆ। ಎಣಿಸೆ ತಿಂಗಳು ಮೂರದಾಯ್ತು॥೩॥ ಎನುತಾಗ ಮನದಲ್ಲಿ ತಿಳಿಯುತ್ತ ಚಿಂತಿಸಿ। ಘನ ದುಃಖದಲಿ ನೋಯುತ । ಇನಿತೀಗ ದೇಹವ ನೋಡೇ॥ ಹೊಟ್ಟೆಯುಬ್ಬುತಲಿದೆ ದೃಷ್ಟಿಸಿ ಜನರೆಲ್ಲ ದುಷ್ಟಳು ಯನ್ನುತ ಜರದು। ಹೆಟ್ಟಿ ಕುಟ್ಟುವ ನುಡಿಗೆ ವಟ್ಟನಲಿ ನಾನಿಂದು । ಕೆಟ್ಟೆನು ಜಗದಿ ತಾನೆಂದು ॥೪॥

ಕಾಪಿ ಅಷ್ಟತಾಳ

ದೃಷ್ಟಿಸುತ ಕೆಟ್ಟ ಸಿಂಗಿಯು ದುಷ್ಟ ತರಣಿಮಣಿಯನ್ನು। ವರದಳು । ಕೆಟ್ಟ ಕಾರ್ಯವ ದುಷ್ಟೆ

ಗೈಯುತ ಸೃಷ್ಟಿ ಜನರನ್ನು। ವಂಚಿಸೆ। ತಟ್ಟ ನೀ ಕಡೆ ಅಟ್ಟ ಹಾಸದಿ ಕೆಟ್ಟ ಮದ್ದನ್ನು । ತಿನುತಲಿ। ದುಷ್ಟ ಗರ್ಭವ ಳಿಸುತಲ್ಲಿಯೇ ಶ್ರೇಷ್ಠಳೆನುತಿನ್ನು। ಮೆರೆಯಲು। ಎಷ್ಟು ದ್ರವ್ಯವ ಕೊಟ್ಟೆಯಾದರು। ಕೆಟ್ಟ ಕಾರ್ಯಕೆ ಮದ್ದ ಕೊಡೆ ನಾ। ಹುಟ್ಟಲಾ ಶಿಶು ನಿನಗೆ ಮೊದಲಿಗೆ। ದುಷ್ಟಳೆನ್ನುತ ಜರೆಯೆ ಜಗದಲಿ॥೧॥ ಆದರಿನ್ನೊಂದದುವೆ ಪೇಳುವೆ ಈ ದುರಂತವನು ಕೆಲದಿನ। ಸಾಧಿಸುತ ನಿ। ಮೇದಿನಿಯೋಳು ಮೋದರಹಿತಿನ್ನು। ಕಾಲದಿ। ಹಾದರದಲಾ ಆದ ಶಿಶುವನು ನಾದಯದ ಆ ಪರಿಯನ್ನು। ಹೆರಿಗೆಯ। ಮೇದಿನಿಯ ಜನ ಈದು ನೀತಿಯ ಆದ ಪರಿಯನ್ನು। ಸಹಜದಿ। ಈ ಧರೆಯೊಳದನು ಕಳೆಯುತ। ಆದ ಕಷ್ಟವ ತೊಲಗಿಸುವೆ ನಾ। ಆದ ವೆಚ್ಚವ ನೀನೆ ಭರಿಸಲು। ಸಾಧು ತನದಲಿ ಸಲಹಿ ಕಳುಹುವೆ ॥೨॥

ಕೇದಾರಗೌಳ ಝಂಪೆ ತಾಳ

ಸಂತೈಸಿ ತರಣಿ ಮಣಿಯನ್ನು । ಸಿಂಗಿ ತಾ । ಇಂತು ಯೋಚಿಸುತಿನ್ನು । ಎಂತ ಪಿಂಡವೊ ಹೊತ್ತಳಿನ್ನು । ವೆಂಬ ಪರಿ। ಕಂತು ಹರನ ಬಲ್ಲನಿನ್ನು॥೧॥

ಕಾಂಭೋದಿ ಝಂಪೆ ತಾಳ

ಪೃಥ್ವಿಪತಿ ಕಾಂಭೋಜ ಚಿತ್ರಕೇತನ ಮತ್ತೆ। ಸ್ವಸ್ತದಿಂ ಪೀಠವನು ಅಡರಿ । ಸುತ್ತಣದ ವಾರ್ತೆಯನು ಅರಿಯುತ್ತ ಬಳಿಕವನು। ಪುತ್ರರಿಲ್ಲದ ಬಾಳು ವ್ಯರ್ಥ ॥೧॥ ಪಟ್ಟದರಸಿಯಿನ್ನು ಪದ್ಮಾಕ್ಷಿಯಹಳಿನ್ನು। ಎಷ್ಟು ಕಾಲವೊ ಸಂತು ಯಿನ್ನು। ಹುಟ್ಟಲಿಲ್ಲವು ಯಿನ್ನು ಬಾಳಿನ ಕುಡಿಯೊಂದು। ದುಷ್ಟ ಪಾಪಿಯು ತಾನೆ ಯಾದೆ॥೨॥ ಪ್ರಾರಬ್ಧವನು ಕಳೆಯೆ ಮಾರಾರಿಗ ರಿದದುವೆ। ಶ್ರೀ ರಮಣ ಕಾಯೊ ನೀ ಯಂದು। ಬೇರೊಬ್ಬ ನಾರಿಯಲಿ ಪಡೆಯೆ ನಾ ಪುತ್ರರನು। ತೋರುವಳು ವೈಷಮ್ಯ ಯಿವಳು ॥೩॥ ಪಾರಾಗುವ ಯತ್ನ ತೋರದೆ ಚಿಂತೆಯೊಳು। ಧಾರುಣಿಪ ನಿರುತಿರಲಿಕಂದು। ನಾರಿ ಪದ್ಮಾಕ್ಷಿಯು ಬಾರಿ ಚಿಂತೆಯ ತಳೆದು। ಮಾರ ಜನಕನೆ ಪೊರೆಯೊ ಯಂದು ॥೪॥

ಕೇದಾರಗೌಳ ಅಷ್ಟತಾಳ

ಸುದತಿಯು ಚಿಂತೆಯ ಹದನ ತಾ ನರಿಯದೆ। ವಿಧಿಯ ತಾ ದೂಷಿಸುತ। ಒದಗಿದ ತಾಪವ ಸಹಿಸಲಾರದೆ ಮತ್ತೆ। ವಿಧದಿ ಚಿಂತಿಸುತಿರಲು ॥೧॥ ವ್ಯರ್ಥವು ಸ್ತ್ರೀ ಜನ್ಮ ಪುತ್ರರ ಪಡೆಯದೆ। ಪೃಥ್ವಿಯೊಳಿಹ ಬಾಳ್ವೆಯು। ಇತ್ತ ಕುಲಕೆ ದ್ರೋಹಿ ಅತ್ತ ವಂಶಕೆ ಪಾಪಿ। ಮತ್ತೆ ನಾಕವು ನಾಸ್ತಿಯು॥೨॥ ಪರಿ ತಾಪದೊಳಗಿರೆ ಹರಿಯುತ್ತ ಸಖಿಯಳು। ಕೊರತೆಯ ದೇನೆಂದು ಕೇಳೆ । ವರದಳು ನಾ ಬಂಜೆ ದೊರಕಲಾರದು ಮುಕ್ತಿ। ಇರದು ತಾ ನೆಮ್ಮದಿಯು ॥೩॥ ಎನ್ನಯ ರಮಣನು ಖಿನ್ನನಾಗಿಹ ಮತ್ತೆ। ಎನ್ನಿಂದ ಬರಡಾಯ್ತು ವಂಶ। ಮುನ್ನಿನ ಪಿತೃಗಳ ಕೋಪಕ್ಕೆ ಗುರಿಯಾದೆ। ಇನ್ನೂಪಾಯವ ಪೇಳು ಮತ್ತೆ॥೪॥

ಮಧ್ಯಮಾವತಿ ತ್ರಿವುಡೆ ತಾಳ

ಅರಸಿ ಸುಮ್ಮನೆ ಮರುಗ ಲೇತಕೆ। ಪರಿಯ ದೆತ್ನವ ಪೇಳ್ವೆ ಲಾಲಿಸು। ಧರಿಸಿದೆನು ತಾ

ಗರ್ಭವೆನ್ನುತ। ವರೆದು ಕೆಲ ದಿನ ಮುಂದಕೆ। ಹರುಷದಿಂದ ॥೧॥ ಕಳೆದು ಕಡೆ ನವ ಮಾಸ ದಂತ್ಯಕ್ಕೆ। ವಲವಿನಲಿ ಶಿಶು ಪಡೆದೆ ನೆನ್ನುತ। ತಿಳಿಯ ಹೇಳ್ವದು ಲೋಕ ಜನರಿಗೆ। ಗಳಿಲ ನಾ ಶಿಶುವ ಕೊಡುವೆನು। ತಪ್ಪನೆಂದು ॥೨॥ ಸುಗಮದಿಂದಲಿ ತಂದು ಕೊಡುವೆನು। ಬಗೆಯೆ ದ್ರವ್ಯಕೆ ಗುಪಿತದಿಂದಲಿ। ಸುಗುಣೆ ಬಿಡು ಬಿಡು ಯೋಚನೆ। ಬಗೆಯ ತೋರ್ಪೆನು ಮುಂದಕೆ। ನೆಚ್ಚಿಕೊಳ್ಳೆ ॥೩॥

ಭಾಮಿನಿ

ಎಲ್ಲವನು ನಾ ಮುಂದ ಕೊರೆಯುವೆ। ಫುಲ್ಲಲೋಚನೆ ಚಿಂತೆ ತೊರೆಯೆನೆ। ಗುಲ್ಲುಮಾಡದೆ ಒಪ್ಪಿ ದ್ರವ್ಯವ ನಿತ್ತು ಸಖಿಯಳಿಗೆ ॥ ಚೆಲ್ವ ತೆರದಲಿ ಗರ್ಭ ಧರಿಸಿದೆ। ಇಲ್ಲ ಯನಗೆಣೆ ಯಾರು ಯನ್ನುತ। ಸುಳ್ಳು ನಟಿಸುತ ಲಿರಲಿಕಿತ್ತಲು ಪುರದಿ ನೆಲೆಸಿರುವ ॥೧॥

ಕೇದಾರಗೌಳ ಝಂಪೆ ತಾಳ

ಸಿಂಗಕ್ಕ ನೆಡೆ ಗೈದುತ। ಇದಕೀಗ। ಅಂಗವೆ ನೆಂದರಿಯುತ। ತುಂಗ ಕುಚಯುಗೆಯು ಯಿರಲು। ಮಾಗಧದಿ। ತುಂಗ ವಿಕ್ರಮ ಯಾಗಲು ॥೧॥ ಸೇನನಾಯಕ ನೆನಿಪನು। ದೃಢಭಲನು। ನೂನ ಮನದೊಳ ಗರಿತನು। ನೂನ ವಾಗಿದೆ ಕಜ್ಜವು । ಕಾಂಭೋಜಿ । ಕೆನುತೀಗ ನಾ ಪೋಪೆನು ॥೨॥

ಕೇದಾರ ಗೌಳ ಅಷ್ಟತಾಳ

ಅತ್ತಲೀ ಕಾಂಭೋಜದಲ್ಲಿಗೆ ತೆರಳುತ್ತ। ಅತ್ತೆ ಸ್ರಿಂಗಿಯ ಗೃಹದಿ। ಚಿತ್ತ ನೆಮ್ಮದಿಯನ್ನು ಪಡೆದು ತಾ ಬಹೆನೆಂದು। ಆರ್ತಿಯಿಂ ಬಂದನಾಗ ॥೧॥ ಹೊತ್ತ ಭಯವನು ತಾನು ಕಳೆಯಲಿಕಕಿಳಲು। ಮತ್ತೆ ಸ್ರಿಂಗಿಯ ಗೃಹಕೆ। ಹೊತ್ತು ಕಟ್ಟಳೆ ಮೀರಿ ಮತ್ತು ಮತ್ತಲ್ಲಿಯೆ। ಸುತ್ತುತಲಿರುತಿರಲು ॥೨॥

ವಾರ್ಧಿಕ

ಸೇನಾದಿ ಪಾಲನಂ ತನಯನಂ ವಿನಯನಂ। ಕ್ಷೋಣಿಯೊಳು ನಡೆತಂದು ಈಕ್ಷಿಸುತ ಪೇಕ್ಷಿಸುತ। ಜಾಣೆ ಯಕಿಲಳನಂದು ನೋಟದಿ ಮಾಟದಿಂ ಬೇಡಿದಂ ಮಾತಾಡಿದ ॥ ಬಾಣ ಹೊಡೆದನಗೆ ಮಾರನಾ ಕ್ರೂರನಂ। ಜಾಣೆ ಕೇಳ್ ನೀ ಯನ್ನ ದೂಡದಲೆ ಕಾಡದಲೆ। ಕ್ಷೋಣಿಯೊಳಗೊಪ್ಪುತಲಿ ಪ್ರೇಮ ದಿಂ ಕಾಮದಿಂ ನುಡಿಸುತಲಿ ನಡೆಸೆಂದನು ॥೧॥

ಕಾಂಭೋಜ ಝಂಪೆ ತಾಳ

ಕುಸುಮ ಗಂಧಿಯೆ ನಿನ್ನ ಪೆಸರೆನ ದೂರೆಲ್ಲಿ। ವುಸುರವುದು ತಾಯ್ ತಂದೆ ಯಾರು। ಬಿಸಜ ಬಾಣನು ಯನ್ನ ಯಿರವ ಕಂಗೆಡಿಸಿದನು। ವಸುಧೆಯೊಳು ನೀ ನೆತ್ತಿ ಸಲಹು ॥೧॥ ದಿನಗುಪ್ತನೆನ ತಂದೆ ಜನನಿಯಾ ರಮೆಯಂದು। ಜನನ ಕೀ ಧಾರಿಣಿಯೇ ತಿಳಿಯೆ। ಜನನಿ ಜನಕರು ಹಿಂದೆ ಸೇರಿದರು ಯಮಪುರಿಗೆ। ಘನ ನಾಮು ವೆನದಕಿಲಳೆಂದು ॥೨॥ ಪಿತನ ತಾಯಿ ರಕ್ಷೆಯೊಳು

ಕ್ಷಿತಿಯೊಳಗಿರೆ ನಾನು ಹಿತದ ಹೆಸರದದುವೆ । ನಿನ್ನ ದೇನು । ಮತಿಯುತನೆ ವರೆಯೆನಲು ಅತಿಶಯದೊಳ್ ವಿವರಿಸಿದ । ಸತಿಯೊಡನೆ ತಾನಂದು ಮುಂತು ॥೩॥ ಸ್ಮರನ ಹತಿ ಹೆಚ್ಚಿವುದು ತರುಣಿ ನೀ ಪೊರೆಯನಲು। ವರುಷ ಒಂದರ ವೃಥವು ಯನಗೆ। ಭರಿತವದು ಮಧ್ಯದಲಿ ಪುರುಷ ಸ್ಪರ್ಷವೆ ಯಿಲ್ಲ। ತೆರಳಿ ನೀ ಬರುವುದ್ಯೆ ಮುಂದೆ ॥೪॥

ಭಾಮಿನಿ

ತಿಂಗಳೆಂಟನು ಕಳೆದ ಬಳಿಕಾ। ತುಂಗ ವಿಕ್ರಮ ನಿನ್ನ ಕರವನು। ಸಂಗಕ್ಕಾಗಿಯ ಹಿಡಿವೆ ನೆನ್ನಲು ಒಪ್ಪುತಾಕೆಯನು ॥ ಭಂಗ ಪಡಿಸದೆ ಕಳುಹಲಲ್ಲಿಯೆ। ಸೃಂಗಿ ಗೃಹದಲಿ ಕೆಲವು ದಿವಪರಿ। ತುಂಗ ತೋಷದೊಳುಳಿದು ತೆರಳುತಾ ಲಿರಲು ದೂತಿಯಳು ॥೧॥

ಕೇದಾರಗೌಳ ಅಷ್ಟತಾಳ

ತರುಣಿ ತಾ ಹರುಷದಿಂ ದಿರುತಿರ ಲಲ್ಲಿಯೆ। ಧರಣಿಪಾಲನ ಸತಿಯು। ವರಸಖಿ ಗುಪತದಿ। ಬರುತಿರೆ ಸೃಂಗಿಯು। ಬರ ಬರ ಯನು ತಿರ್ದಳು ॥೧॥

ಸುರುಟಿ ಏಕತಾಳ

ಗುಂಗಿನೊಳಿರುತಿರುವ। ಸೃಂಗಿಯು। ಮುಂಗಡೆ ನಿಂತಿರುವ। ಅಂಗನೆ ಗೆಂದಳು। ಗುಂಗನು ಬಿಡದೆಲೆ। ಮಂಗನ ತೆರದಲಿ। ಸೃಂಗಿಯ ದೀ ತೆರ ॥೧॥ ಎಂಬುವದೇನೆ ಹುಡುಗಿ ವಟ ವಟ। ಹಂಬಲಿಸುತ ಬೆಡಗಿ। ಚುಂಬಿಸಿ ಪುರುಷನ। ಡಂಬದಿ ಕೂಡುತ। ತುಂಬಿಸಿ ಗರ್ಭವ। ಹುಂಬಳದಾದೆಯ॥೨॥ ಕೊಡೆ ನಾ ನೌಷಧವು। ಬರುವುದು। ತಡೆಯದೆ ಪಾತಕವು। ನುಡಿಯಲು ಸೃಂಗಿಯು। ಸಡಗರದಿಂದಲಿ। ಒಡನೆಯು ಧೂತಿಯು। ನುಡಿದಳ ದೀತೆರೆ ॥೩॥

ಭಾಮಿನಿ

ರಾಣಿ ಗರ್ಭವ ಧರಿಸಿ ಮೆರೆವಳು। ನೂನವಾಗಿದೆ ಶಿಶುವು ಗರ್ಭದಿ। ಎನುಪಾಯವೊ ಯಂದು ನೀನೆ ಬಲ್ಲೆಯನಲಾಗ॥ ಜಾಣೆ ಸೃಂಗಿಯು ತಿಳಿದು ವರೆದಳು। ನಾನು ಹೇಳುವ ದಿನದಿ ನಿನ್ನಯ। ರಾಣಿ ಹೆರಿಗೆಯದಾದುದಾದರೆ ಶಿಶುವ ಪಡೆಯುವಳು॥೧॥ ಮರುಳೆ ಹೆಂಗಸೆ ಮಾಸ ನವಮವು। ಹೆರಿಗೆ ಗೆಂಬುವಕಾಲ ವಾದರು। ಬರಿತ ಕ್ಷೀಣವು ವೃದ್ಧಿಯಿರುವುದದ ತಿಳಿಯೆ ನೀ ನಿದನ॥ ಅರಿಯೆ ಅನ್ಯಳ ಹೆರಿಗೆ ಯಾ ದಿನ ಧರಣಿಪನ ಸತಿ ಹೆತ್ತಳಾದರೆ। ದೊರಕುವುದ ಶಿಶು ಧನವ ಕೊಡುವುದ ದೆಲ್ಲ ನಡೆಸುವೆನು ॥೨॥

ಸೌರಾಷ್ಟ್ರ ತ್ರಿವುಡೆ ತಾಳ

ಕೊಡುವೆ ಧನವನು ಯಂದು ನಂಬಿಸಿ। ಜಡಜ ಮುಖಿ ತಾ ತೆರಳೆ ಕೆಲದಿನ। ಸಡಗರದಿ ತಾ ಕಳೆಯೆ ರಾಣಿಯು। ನುಡಿಯುದೇನು ॥೧॥ ಸೃಂಗಿಯ ಗೃಹದೊಳೊಗೊಂದು ಮೂರ್ತದಿ। ಅಂಗನಾ ಮಣಿಯಮಳ ಶಿಶುಗಳಿ। ಗಂಗ ವಿತ್ತಳು ಗುಪಿತದಿಂದಲಿ। ಸೃಂಗಿಯಾಗ ॥೨॥ ದೃಷ್ಟಿ

ನೂನದ ಶಿಶುವು ಗಂಡದು। ದೃಷ್ಟಿ ಸಹಿತದ ಶಿಶುವು ಹೆಣ್ಣದು। ಸೃಷ್ಟಿ ಪಾಲನ ಸತಿಯು ಹೆತ್ತಳು। ಹೆಣ್ಣುಶಿಶುವ ॥೩॥

ಭಾಮಿನಿ

ಧರಣಿಪತಿ ತಾ ಪುತ್ರಿ ಜನನದಿ। ಅರಿಯುತಾ ಗಲೆ ಹರುಷದಿಂದಲಿ। ಪುರದ ಪ್ರಜೆಗಳಿಗಾಗ ನುಡುಗರೆ ಕೊಟ್ಟನುತ್ಸಹದಿ॥ ಇರಲಿ ಕಿತ್ತಲು ಕುರುಡ ಬಾಲನು। ಪೊರೆಯುತಿರ್ದಳು ಸೃಂಗಿ ಬಿಡದಲೆ। ತರಳ ನವ ತಾ ತನ್ನ ತನಯನೆ ಯಂದು ಪ್ರೇಮದಲಿ॥

ಕಾಂಭೋಜ ಝಂಪೆತಾಳ

ಮತಿ ಚತುರೆಯಂದಂದು ಸುತೆಯಳನು ಕರೆಯುತ್ತ। ಸ್ಥಿತಿ ಪಾಲ ನಿರುತಿರಲು ಸೃಂಗಿ। ಚತುರ ಮತಿಯಂತೆಂದು ಜಾತಾಂಧನನು ಕರೆದು। ಹಿತದಿಂದ ಸಲಹುತಲಿರಲು ॥೧॥ ಇನಿತಲ್ಲಿ ಶೈಶವ ಕಳೆದು ಬಾಲ್ಯವ ನೂಕಿ। ವನಿತೆಯರಿತಳು ಬಹಳ ವಿದ್ಯಾ। ವನಿತೆ ಸೃಂಗಿಯ ಗೃಹದಿ ಜನರಾಡುವುದ ಕೇಳ್ದು ಮನನ ದಿಂದರಿತ ನಿವ ವಿಷಯ॥೨॥

ಸೌರಾಷ್ಟ್ರ ತ್ರಿವುಡೆ ತಾಳ

ಇತ್ತಲೀತೆರ ಲಿರಲಿ ಕೊಂದಿನ। ಮತ್ತೆಯಲ್ಲಿಗೆ ಮಗಧ ಭೂಪನ। ಗುಪ್ತಚಾರರು ಗುರುವು ಶಿಷ್ಯರ। ದಂತೆ ನಟಿಸಿ॥೧॥ ಬಂದು ಪುರದುದ್ಯಾನ ಮಧ್ಯದಿ। ನಿಂದು ಯೋಗವು ಗುರು ಹೊಂದಿರೆ। ಮುಂದೆ ಶಿಷ್ಯನು ಸೇವೆ ಗೈಯುತ। ಚಂದದಿಂದ॥೨॥ ಇರುವ ಪರಿಗಳ ಜನರು ತಿಳಿದವ। ನರಿತು ನೃಪನೆಡೆ ಸಾರುತಾಗಲೆ। ವರೆದು ಮಹಿಮರ ಪರಿಯನೆಲ್ಲವ। ನರಿತ ಜನಪ॥೩॥

ಸಾಂಗತ್ಯ ರೂಪಕತಾಳ

ಜನಪ ತಾ ನರಿಯುತ್ತ ಪುರಜನರನ್ನು ಕೂಡಿ। ಕ್ಷಣದಿ ತಾ ನೈ ತರು ತಲ್ಲಿ॥ ಮಣಿಯುತ್ತ ಗುರುವಿಗೆ ನಿಲ್ಲಲಿ ಕರಿಯುತ್ತ। ಜನ ಪಾಲ ಗಿಂತೆಂದ ಗುರುವು॥೧॥ ಸ್ವಸ್ತಿ ವಾಚನವನ್ನು ವರೆಯುವಷ್ಟರಲ್ಲಿ। ಪೃಥ್ವಿ ಪಾಲನ ಬಳಿಯೇ ಸಾರ್ದು। ಬಿತ್ತರಿಸಿದಾನಂದ ಹುಟ್ಟು ಕುರುಡನು ಬೇಗ। ಉತ್ತಮ ರಿವರಲ್ಲವೆನುತ॥೨॥ ಧರಣಿಪ ಲಾಲಿಸು ವರೆಯುವೆ ವಿವರವ। ಧುರುಳರು ಯಿವರಿನ್ನು ಮತ್ತೆ। ಮರುಳು ಮಾತಲಿ ನಮ್ಮ ಮೋಡಿಯ ಮಾಡಿಯೆ। ಪರಿ ಹಾಸ್ಯ ಮಾಡುವರ್ ಕಡೆಗೆ॥೩॥

ಭೈರವಿ ಏಕತಾಳ

ಕುರುಡನ ನುಡಿಯನು ಕೇಳಿ। ಗುರು। ಭರದಲಿ ಕೋಪವ ತಾಳಿ। ಪರಪರ ವರೆಯದಿರ್ ಧೂರ್ತ। ನಿನ್ನ ಪರಿಯನು ತಿಳಿದುಕೊ ಕತ್ತೆ॥೧॥

ಕೇದಾರಗೌಳ ಅಷ್ಟತಾಳ

ದೃಷ್ಟಿ ಹೀನನು ನಾ ನಾದರು ನೀ ವಟ । ಗುಟ್ಟುವ ಮಂತ್ರದಲಿ । ಎಷ್ಟರ ಮಹಿಮೆಯು ಯಾವುದ ದಿರದೆಂದು । ತಟ್ಟನೆ ನಾ ತೋರುವೆ ॥೧॥

ಭೈರವಿ ಏಕತಾಳ

ಮಂತ್ರದ ಪರಿಗಳ ನಿನ್ನು । ನೀ । ನೆಂತದ ತಿಳಿಯುವೆ ಮುನ್ನ । ಚಿಂತಿಪ ನಯನವೆಯಿಲ್ಲ । ನಿನ । ಗೆಂತದು ಬಾರದು ಕುಲ್ಲ ॥

ಕೇದಾರಗೌಳ ಅಷ್ಟತಾಳ

ಕಣ್ಣು ತಾ ನಿರದಿರೆ ಕುರುಡನೆ ಯಂಬುದು । ಕಣ್ಣದು ಜ್ಞಾನಕೆಷ್ಟು । ಎಣ್ಣಿಸೆ ಸಹಕಾರ ಜ್ಞಾನವೆಯಿರದಿರೆ । ಕಣ್ಣಿನ ಪರಿಯಂತದು ॥೧॥

ಭಾಮಿನಿ

ಜ್ಞಾನಿಯೆ ನೀ ನಾದರೀಗಲೆ । ಜ್ಞಾನ ನೀಡುವ ಶಾಸ್ತ್ರಮತದಲಿ । ಉನ್ನತದಲಾ ಪ್ರಶ್ನೆ ಕೇಳ್ದರೆ ಕ್ಷಣದೊಳುತ್ತರವ ॥ ಮಾನ್ಯ ರಾಗಿಹ ನಾವು ಕೊಡುವೆವು । ಕೋಣನಂತೆಯೆ ವದರ ಬೇಡಲೆ । ಕ್ಷೋಣಿಪತಿ ತಾನದರ ನಿರ್ಣಯ ಮಾಡಲೆನ್ನುತಲಿ ॥

ಕೇದಾರಗೌಳ ಝಂಪೆತಾಳ

ಧರಣಿಪತಿ ಯಂದನಾಗ । ನೆರದಿರುವ । ಪುರಜನರ ನಡುವೆ ಬೇಗ । ಗುರು ಶಿಷ್ಯರಿತ್ತ ಕೇಳಿ । ಶಾಸ್ತ್ರದಿ । ಕುರುಡನಿದ ಪ್ರಶ್ನೆ ಕೇಳಿ ॥೧॥ ಉತ್ತರವ ಕೊಡದೆ ಯಿರಲು । ನೀವ್ ಅತಿ । ಧೂರ್ತರೆ ಜಗದಿ ಮೇಲು । ಪತ್ತನದಿ ನಿಮಗೆ ಯಾಗ । ಬಲು ಶಿಕ್ಷೆ । ಇತ್ತಪೆನು ನಾನು ಬೇಗ ॥೨॥ ಆಗಲದ ಕೇನು ಯಿಂದು । ವರೆದಂತೆ । ಸಾಗುವೆವು ನಾವು ಯಂದು । ಈಗಲೆ ಪ್ರಶ್ನೆ ಬರಲಿ । ಕುರುಡ ತಾ । ನಾಗರುವ ನಡುವೆ ಮರುಳು ॥೩॥

ಭಾಮಿನಿ

ಶಕ್ತಿಧರಿಸಿದೆ ಜಗವನೆಂಬರು । ಶಕ್ತಿಯಂದರ ದೇನದೆಲ್ಲಿದೆ । ಶಕ್ತಿ ಮೇಲೊ ಯುಕ್ತಿ ಮೇಲೊ ಗುರುವು ಶಿಷ್ಯರಿಗೆ ॥ ಪೊತ್ತ ವಿದ್ಯೆಯ ನೊರದರಾದರು । ಪೂರ್ತದರಿಯರದೊಂದೆ ತರದಲಿ । ಮತ್ತ ದೇನದು ವಿದ್ಯ ಬುದ್ದಿಯ ಮರ್ಮ ವೆಂತದುವೆ ॥೧॥

ವಾರ್ಧಿಕ

ವಿದ್ಯಯೊಳ್ ಬುದ್ದಿಯೊ ಬುದ್ದಿಯೊಳ್ ವಿದ್ಯಯೊ । ಬುದ್ದಿ ವಿದ್ಯಗಳುಗಮ ಇದ್ದು ದಾವೆಡೆಯಲ್ಲಿ । ಶುದ್ಧನೆಂಬವ ನಾರು ಜಗದೊಳಗೆ ನೀನದನು ಇದ್ದಂತೆ ಉಸುರೆಂದನು ॥ ಶುದ್ಧ ಪಂಗಳಿಕ ನುಡಿಯತಾನರಿಯದೆ । ಇದ್ದರೈ ಗುರು ಶಿಷ್ಯರೆಂಬ ಕಾಪಟಿಗಳು । ಜದ್ದಿನಲಿ ಸೋಲುತಲಿ ಯಿರುವ ಪರಿ ಗಾ ಕ್ಷಣದಿ ಸಿದ್ದರಿಲ್ಲೆಂದರಿತರು ॥೧॥

ಸೌರಾಷ್ಟ್ರ ತ್ರಿವುಡೆ ತಾಳ

ಉತ್ತರಿಸಿ ನೀ ವೆನ್ನಲಾಕ್ಷಣ । ಉತ್ತರವ ನೀವ ರರಿಯದಾಗಿರೆ । ಕತ್ತೆಯಂದದೊಳೊ ದೊರುತಿರುತಿರೆ । ಸತ್ಯ ತಿಳಿದು ॥೧॥ ಸೇರಿದಾ ಜನ ಗಡ್ಡ ವೆಳೆಯಲು । ಜಾರಿತಾಗಲೆ ಮರ್ಮ ತಿಳಿಯಿತು। ಧಾರಿಣಿಪತಿ ಕ್ರೋಧದಿಂದಲಿ। ಜರೆದನಾಗ॥೨॥ ಹಣೆಗೆ ನಾಮವ ದೆಳೆದು ತಲೆಯನು। ಕ್ಷಣದಿ ಬೋಳಿಸಿ ನಿಮ್ಮ ದೊರೆಗಿ। ಗಿನಿತು ಗೈದಿಹ ಪರಿಯನ್ನೆಲ್ಲವ। ವರೆಯಿರೆಂದ ॥೩॥ ಧರಣಿಪತಿ ಯಾ ಮಗಧ ಭೂಪನ । ಚರರು ನಾವೆಲೆ ನಿಮ್ಮ ನಾಡಿನ । ಪರಿಯ ನರಿಯಲು ಬಂದೆವಿಲ್ಲಿಗೆ। ಪರಮ ಸತ್ಯ ॥೪॥ ನೀತಿ ನಿಯಮವ ದಿಲ್ಲದಾ ದೊರೆ। ಧಾತ್ರಿಯೊಳು ಬಹು ಮದ್ಯ ವ್ಯವಸನಿಯು। ಆತು ಕೊಂಡಿದೆ ಜಾರತನವದು । ಧೂರ್ತ ನವನು ॥೫॥ಸಿಟ್ಟಿನಿಂದಲೇ ಧೂರ್ತರೆನ್ನುತ । ಅಟ್ಟ ಲಾಕ್ಷಣ ಬಹಳ ದುಃಖದಿ। ಸೃಷ್ಟಿಪಗೆ ತಾ ದೂರ ನೊರೆಯಲು ಬರಲಿಕಿತ್ತ॥೬॥

ಕೇದಾರಗೌಳ ಅಷ್ಟತಾಳ

ಇತ್ತ ಮಾಗಧನಂದು ತನ್ನಯ ಪರಿಯನ್ನು। ಚಿತ್ತದಿ ನೆನೆಯುತಿಂತು ॥ ಪುತ್ರರ ಭಾಗ್ಯದಿ ವಂಚಿತ ನಾಗಿಹೆ। ಪ್ರೀತಿಯ ಮಡದಿಯನ್ನು॥೧॥ ಹಿತದಿಂದ ಸ್ವರ್ಗವ ಮುನ್ನವೆ ಸೇರಿದಳ್ । ಗತಿಯ ಕಾಣೆನು ಯನಗೆ । ಅತಿಯಾದ ಮುದಿತನ ಸನಿಹಕೆ ಬರುತಿರೆ । ಕ್ಷಿತಿಗಾರು ವಡೆಯರಿನ್ನು ॥೨॥ ಅನುಜೆಯ ಕಂದ ತಾನೋರ್ವನೆ ಯಿಹನಿಲ್ಲಿ। ಎಣಿಸಲಿ ಕೆಡ್ಡನವ । ಅನುಜೆಯ ದಾಯುವು ಮುಗಿದಿದೆ ಮೊದಲಲ್ಲಿ। ಮನಸ್ಸಿನ ಬಯಕೆಯಂತೊ ॥೩॥

ಸೌರಾಷ್ಟ್ರ ತ್ರಿವುಡೆ ತಾಳ

ಮದುವೆ ವಿರಚಿಸಿ ಹೆಡ್ಡನಿಗೆ ತಾ । ಅದುವೆ ಪಟ್ಟವ ಕಟ್ಟಿ ಮುಂದಕೆ । ಪದುಮನಾಭನ ಧ್ಯಾನ ಮಾಡುತ । ಕಾಲ ಕಳೆವೆ ॥೧॥ಸುದತಿ ಯಾವೆಡೆ ಯಿಹಳ ದೆಂಬುದು। ಮೊದಲು ತಿಳಿಯುತ ಜಾಣತನದಲಿ। ಸುದತಿಯಳ ತಾ ನೊಂಚಿಸುತಲಿ। ಮದುವೆ ಮಾಳ್ಪೆ ॥೨॥ ಎನುತಲೀಪರಿ ಜನಪ ನಿರುತಿರೆ। ಜನಪ ದೂತರು ಬರುತ ಲಲ್ಲಿಯೆ। ಹಣೆಯ ಚಾಚುತ ಚರಣ ಕಮಲದಿ। ನುಡಿದರಿಂತು ॥೩॥

ಮುಖಾರಿ ಆದಿ ತಾಳ

ಮಗಧದಿಪನೆ ಲಾಲಿಸು। ನಾವೆಂಬ ಮಾತ॥ ಮಿಗೆ ದಯದಿಂದ ಗ್ರಹಿಸೊ।ಬಗೆ ಬಗೆ ದೇಶವ ಸುತ್ತುತ ಹರುಷದಿ ।ಬಗೆ ಬಗೆ ವಾರ್ತೆಯ ನರಿಯುತ ಗುಪಿತದಿ ।ವಗುಮಿಗೆ ಯಿಂದಲಿ ಮಿಗುವರಿಯುತ ನಾವ್ ॥೧॥ ಧರಣಿಯಾ ಕಾಂಭೋಜಕೆ। ಹರಿದೆವು ಅಲ್ಲಿ। ಪುರ ಮಧ್ಯೆ ಸಾರುತಲಿ। ಗುರು ಶಿಷ್ಯರೆನುತಲಿ ಯಿರಿಸಿಯೆ ಗುಟ್ಟನು । ಪರಿ ಪರಿ ವಿಷಯವ ನರಿಯುತಲಿದ್ದೆವು ॥೨॥ ಪುರಜನರೆಲ್ಲ ರ ಸೇರುತ। ನಮ್ಮೆಡೆ ಬಂದು। ಚರಣದಿ ತಲೆ ಚಾಚುತ। ಪರಿ ಪರಿ ಬಂದನ ಹರಿಸು ನೀವೆನ್ನುತ। ಇರದಲ್ಲಿಯೆ ಗುಟ್ಟನರಿಯದೆ। ಧರಣಿಪ ಬಂದನು ಪರಿಜನರನು ಕೂಡುತ ॥೩॥ ಗುಟ್ಟಿತಾ ನರಿಯದಲೆ। ನಮ್ಮಯ ಪಾದ। ಕ್ಕಿಟ್ಟತಾ ತಲೆಯ ನಲ್ಲೆ। ಇಷ್ಟವ ನೀಡುತ ಹುಟ್ಟುಸಾವಿನ ಯಂತ್ರ। ತಟ್ಟನೆ ಹರಿಯುತ। ಪೊರೆಯೋ ನೀ ಯನಲು। ದೃಷ್ಟಾಂಧನೆನು। ವನು ತಟ್ಟನೆ ತಡೆದನು॥೪॥

ಭಾಮಿನಿ

ಭೃಷ್ಟಕುರುಡನ ಪ್ರಶ್ನೆಗುತ್ತರ। ತಟ್ಟನೊದಗದೆ ಯಿರುವ ನಮ್ಮಯ। ಗುಟ್ಟು ಬಯಲಿಗೆ ಬಂದು ಮುಂದಕೆ ವರೆಯೆ ನಾಚಿಕೆಯು ॥ ಸೃಷ್ಟಿಪನು ಮನ ಬಂದ ತೆರದಲಿ। ಕುಟ್ಟಿ ದವಡೆಗೆ ನಿಮ್ಮ ದೊರೆಯವ। ಭೃಷ್ಟ ಕಾಮನ ಪೂಜೆ ಗೈವನು ಮೃಗದ ತೆರದೊಳಗೆ ॥೧॥ ನೀತಿ ನಿಯಮವ ದಿಲ್ಲದವನಿಗೆ। ಧೂರ್ತನಲ್ಲದೆ ಹಾದರವು ತಾ। ಜಾತೆಯೋರ್ವಳು ರೂಪವತಿ ಯಿಹಳು ಬಳಿಕಿನ್ನು। ದಾತನಾಕೆಯ ತರುವುದಲ್ಲದೆ। ಜಾತ ಕುರುಡನ ತಂದರೊಳ್ಳಿತು। ಖ್ಯಾತ ನೀನೆ ಬಲ್ಲೆ ಮುಂದಕೆ ಯಂದರವರಾಗ ॥೨॥

ಮಾರವಿ ಏಕತಾಳ

ಚಾರರ ನುಡಿಯನು ಕೇಳುತ ಧರಣಿಪ। ಬೊರನೆ ಖತಿಗೊಂಡು। ತೀರಿಸುವೆನು ಮದ ಮೂರ್ಖನ ನಾ। ಸೇರಿಸಿ ಯಮ ಪುರಿಗೆ ॥೧॥ ಕುಲ್ಲ ಕಾಂಭೋಜದ ದದಿಪನು ಯನ್ನಯ। ಕುಲ್ಲತನದಿ ಕೆಣಕಿ। ಹುಲ್ಲೆಯ ಮರಿಯದು ವ್ಯಾ। ಘ್ರನ ಕೆಣಕಿದ ದಿ। ಲ್ಲಾಯಿ। ಹದನ॥೨॥ ಪಡೆಯನು ಕೂಡುತ ಪೊರಟತಾಕ್ಷಣ। ಪೊಡವಿಯೊಳತಿ ಬೇಗ। ತಡೆಯದೆ ಬರುತ್ತೈ ಪುರವನು ಮುತ್ತಿದ। ಕಡೆ ಕಾಲಾವೆ ಯಂದು ॥೩॥ ಚಿತ್ತ ಧ್ವಜನದ ಚಿತ್ತದಿ ತಿಳಿಯುತ। ದೂರ್ತನ ಸದೆ ಬಡಿಯೆ। ಬತ್ತಿಸದಾಯುಧ ಹಿಡಿದೈತರುತಲಿ ದೂರ್ತನೆ ನಿಲ್ಲೆಂದ ॥೪॥

ಶಂಕರಾಭರಣ ಮಟ್ಟೆತಾಳ

ಎಲವೊ ಮಗಧ ಕೇಳೊ ನೀನು। ಖಳರ ತೆರದಿ ಬರುತಲಿಲ್ಲಿ। ಚಲವ ತೋರ ಬೇಡ ನಿನ್ನ। ತಲೆಯ ಕೊಂಬೆನು ॥೧॥ ತಲೆಯ ಕೊಂಬ ಭಟನು ಹೌದು। ಕಲಿಯ ತನದಿ ಚರರ ಜರೆದ। ಚಲವ ತೋರಬೇಡ ಮೂರ್ಖ। ಹುಲು ನೃಪಾಲನೆ॥೨॥ ಸ್ಮರನ ಪೂಜೆಯೆಂಬ ನೆವದಿ। ನರರ ನೀತಿ ನಿಯಮ ಮೀರಿ। ಸುರೆಯ ಕುಡಿದು ಹೆಂಗಳೊಡನೆ। ಬೆರೆವ ಮೂರ್ಖನೆ॥೩॥ ನೀತಿ ನಿಯಮ ಧರ್ಮ ಸಾರ। ಧಾತ್ರಿಯೊಳಗೆ ಹೇಳೆ ನೀನು। ಖ್ಯಾತನಲ್ಲವದರಬೇಡ। ಧೂರ್ಥ ನೆಂದನು ॥೪॥

ವಾರ್ದಿಕ

ಗುರುವಿಗಾ ಶಿಷ್ಯನವ ತರಳ ತಾ ತಂದೆಗಂ। ತರುಣಿಯಾ ಪುರುಷಗಂ ಧರಣಿಪಗೆ ಪ್ರಜೆಗಳಂ। ಅರಿಯುತಲಿ ಪಾಪವಂ ವಿರಚಿಪಗೆ ಬೋಧೆಯಂ ವರದು ತಿದ್ದುತಲವರನು॥ ಸರಿದಾರಿಯಲಿ ನಡೆಸೆ ಹಿರಿಯನವ ಕಿರಿಯನವ। ಇರದು ದೈಜಗದೊಳಗೆ ವರೆದುದಂ ಕೇಳುತಲಿ। ಪರಿಶುದ್ಧನಾಗುತಲಿ ಬಾಳೆನುವ ವಾ ಮಾತು ಪರಿವಿಷವೆ ಯವುದಾತಗೆ॥೧॥

ಭಾಮಿನಿ

ತಿರಿದು ತಿನ್ನುವ ಮೂರ್ಖನೋರ್ವನು। ಧರಣಿ ಪಾಲಗೆ ನೀತಿ ಬೋಧಿಸೇ। ಮರುಳನೆನ್ನುತ ನೂಕಿ ಕಳೆವರು ಧರೆಯ ಮೇಲಿನ್ನು॥ ಪರಮ ಮುನಿಗಳು ಶಾಸ್ತ್ರ ಕೋವಿದ। ವರದರದುವೆ ನೀತಿ ಯಹುದದು। ಮರುಳೆ ಸಮರದಿ ತೋರೆ ನಿನ್ನಯ ಬಲವನೆನ್ನುತಲಿ ॥೧॥

ಸೌರಾಷ್ಟ್ರ ತ್ರಿವುಡೆ

ದುರದ ಮುಖದಲಿ ಗೆಲಿದು ಮಾಗಧ । ಧರಣಿಪನ ಕೈ ಸೆರೆಯ ಪಿಡಿಯುತ । ಶಿರವನುಳುಹುವೆ ವರದ ಮಾತನು। ಗ್ರಹಿಸಿ ನಡೆಯೆ॥೧॥ ಕುರುಡನನು ಕೇಳ್ ನಿನ್ನ ಕುವರಿಯ। ಕರದು ಕೊಡುವುದು ಕಪ್ಪವಲ್ಲದೆ। ವರುಷ ನಡೆಯುವ ಸ್ಮರನ ಹಬ್ಬಕೆ। ಮದ್ಯವನ್ನು॥೨॥

ಕೇದಾರಗೌಳ ಅಷ್ಟತಾಳ

ಧರಣಿಪ ನೆಂದುದ ಕೇಳುತ್ತ ನೃಪನಂದು। ಪರಿ ದುಃಖವನೆ ತಾಳುತ। ಕರೆಸಲು ಕುರುಡನ ಮಾಗಧಗಾಗಲೆ। ವರದನು ಕುರುಡನಿಂತು ॥೧॥ ಭೋಗದ ವಸ್ತುವ ರಾಗದಿ ನೀ ಮತ್ತೆ। ಸಾಗಿಸುವುದು ಧರ್ಮವು । ಭೋಗಕೆ ತಾನೆಂದು ವದಗಲಾರೆನು ಸತ್ಯ । ಹೇಗೆ ನೀ ಕೊಂಡ್ಯೊವೆಯೊ॥೨॥ ಪೃಥ್ವಿಯೊಳಿಹ ವಸ್ತು ಪೃಥ್ವಿಪಾಲನದೆಂದು । ಸುತ್ತೆಲ್ಲ ವರೆವುದಿದೆ। ಪೃಥ್ವಿಯೊಳ್ ಮನುಜ ಸ್ವ ತಂತ್ರನು ನೋಡೆ। ಪ್ರತ್ಯಕ್ಷ ವಾಗಿಹುದೆ ಎಲ್ಲಾ॥೩॥

ಸೌರಾಷ್ಟ್ರ ತ್ರಿವುಡೆ ತಾಳ

ಆದರೆಯು ನಾ ಬಹೆನು ಮನಸಿಗೆ। ಬಾಧೆಯೊದಗುವ ಪರಿಯೊಳಿರುವೆನು। ಸಾಧಿಸುತ ನೀ ಕಾಂಬ ಪರಿಗದು ಮೇದಿನಿಪನೆ ॥೧॥ ಆದುದಾಗಲಿ ತೆರಳು ಮಗಧಕೆ। ಬೇಧವಿಲ್ಲದೆ ನಿನಗೆ ದಿನ ದಿನ। ಸಾಧು ತೆರದಲಿ ವದಗಿಸುವೆ ನಾ। ಗ್ರಾಸ ಒಂದ ॥೨॥

ವಾರ್ದಿಕ

ಧಾರುಣಿಪ ನೆಂದುದಕೆ ಕುರುಡ ತಾ ಸಮ್ಮತಿಸೆ। ಧಾರುಣಿಪ ಕುವರಿಯೊಳ್ ದುಃಖದಿಂದೊಪ್ಪಿಸಿದ । ಭೂ ರಮಣ ಮಾಗಧನು ಪುರಕ್ಕೊಯ್ದು ಹರುಷದಲಿ ಜಾಮಾತಾ ನಿಂಗಾಗಲೆ॥ ಪರಮ ಶುಭ ಮೂರ್ತದಲಿ ಪರಿಣಯವ ನೆಸಗುತಲಿ। ಇರುತಿರಲು ಕೆಲ ದಿನದಿ ಯುವರಾಜ ನಿವನೆಂದು। ಸಾರಿದನು ಪುರದೊಳಗೆ ಒಪ್ಪಿದರಾಗೆಲ್ಲಮತಿ ಬರಡ ಯುವರಾಜನ॥೧॥

ಕೇದಾರಗೌಳ ಅಷ್ಟತಾಳ

ಮತಿಚತುರೆ ಕೆಲದಿನದಿ ಪತಿಯ ಮರ್ಮವ ತಿಳಿದು । ವ್ಯಥೆಯ ತಾ ತಾಳು ತಂದು। ಗತಿಯೇನು ಯನಗಿನ್ನು ಮತಿಗೆ ತಾ ಹೊಳೆಯದದು। ಅತಿ ಕಷ್ಟ ಬಾಳ್ವೆ ತಾ ನೆಂತೊ ॥೧॥ ಪುರುಷನೆಂಬುವನಿವನು ಬರಿದೆ ವಿಗ್ರಹದಂತೆ। ಇರುತಿಹ ಷಂಡ ತಾ ನಿನ್ನು। ಪರಿಕಿಸಲು ಸುಂದರನು ಪುರುಷ ಲಕ್ಷಣ ಮಾತ್ರ। ಇರದವಗೆ ಮತಿ ಪೂರ್ಣವು ॥೨॥ ಪ್ರಾರಾಬ್ಧದೊಳಗಿಂತು ಸೇರಿ ತೀ ಸಂಬಂಧ। ಪಾರಾಗೂಪಾಯ ಕಾಣೆ। ಮಾರನ ಬಾದೆಯು ಸುಡುತಿಹುದುಯನ್ನನ್ನು। ದೂರ ನಾರಿಗೆ ಪೇಳುವೆ॥೩॥ ಮತಿಯ ಬಲದಿ ನಾನು ಹಿತದಿ ಜಯಿಸಲು ಬೇಕು। ವ್ಯಥೆಯ ತಾ ನರಿಯದಂತೆ। ಅತಿಶಯದ ಉತ್ಸಾಹವು ನಡೆಯುವ ಕಾಲದಿ। ಹಿತದ ಮಾರ್ಗವ ಕಾಂಬೆನು ॥೪॥

ಭಾಮಿನಿ

ಅನ್ಯ ಪುರುಷನ ಸಂಗದಿಂದಲಿ। ಇನ್ನು ತಾಪವ ದೂರ ಗೊಳಿಸುತ। ಹೆಣ್ಣು ಜನ್ಮವ ನೂಳುಹಿ ಕೊಂಬೆನು ಗುಪಿತದೊಳಗೆ।। ಚಿಣ್ಣರನು ಪಡೆದಿಹರು ಹಿಂದಕೆ। ಘನ ಮಹಿಮರು ಜಗದಿ ತಿಳಿಯಲು। ಇನ್ನಿದುವೆ ಪ್ರಾರಾಬ್ಧವೆಂಬುದು ಲೋಕದೊಳು ಮತ್ತೆ ।।೧।।

ಸೌರಾಷ್ಟ್ರ ತ್ರಿವುಡೆ ತಾಳ

ವನಿತೆ ಬಹುತೆರ ವ್ಯಥೆಯೊಳಿರುತಿರೆ। ಘನದೊಳುತ್ಸಹ ಕ್ರಮದಿ ಬಂದುದು। ಜನಪ ಮಂತ್ರಿಯ ಸೂನು ಮದನನು। ಹರುಷದಿಂದ ।।೧।। ಪೊರಟ ಮಾರನ ಹಬ್ಬ ಕಾ ದಿನ। ಪುರುಷ ಸ್ತ್ರೀಯರ ಬೇಧವಿಲ್ಲದೆ। ಬರುತಿಲಿರ್ದರು ಸ್ಮರನ ಚಪ್ಪರ। ಕಾಗಲಿಂತು ।।೨।। ಇರುಳು ಹಗಲಿನ ಬೇಧವಿಲ್ಲದೆ। ಸ್ಮರನ ವುತ್ಸಹ ನಡೆಯುತಿರುತಿರೆ। ಭರಿತ ಭೋಜನ ಮದ್ಯಪಾನ ದೊ। ಳಿರಲಿಕಲ್ಲಿ।।೩।। ಹದವ ಮೀರದೆ ಕುಡಿದು ಮದನನು। ಮುದದಿ ಬರಲಾ ವನದ ಮದ್ಯದಿ। ಸುದತಿ ಯಾ ಮತಿ ಚತುರೆ ಕಂಡಳು। ಮದವ ದೇರಿ ।।೪।।

ಭಾಮಿನಿ

ನೋಟ ಪ್ರಥಮದಿ ರಸಿಕರೀರ್ವಗೆ। ನಾಟಿ ಮದನನ ನಲಗು ಸುಪ್ತವ। ಮೀಟೆ ಬೇಕದು ಬೇಕು ಯನು ತೊಳ ದಾಗ ಲಿನಿತವರು।। ನೋಟ ಮೊದಲಿಗೆ ಮಾರ ಚೇಷ್ಟೆಯ। ದಾಟಿ ದ್ವಿತೀಯರು ನಯನ ತುದಿಯಲಿ । ಈಟಿ ಇರಿಯವು ತೆರದೊಳುಭಯರು ಸಾರೆ ಬಳಿ ಬಳಿಗೆ ।।

ಕಲ್ಯಾಣಿ ಆದಿತಾಳ

ಯಾರು ನೀನೆಲೆ ಚದುರೆ। ರೂಪದಿ। ಆರು ಗಾಣೆನು ಬಲರೆ। ಮಾರನ ಸತಿಯೊಳ। ಭಾರಿಯೊಳ್ ಪೇಳ್ವರು। ಧಾರುಣಿಯೊಳುಸಟೆ। ನೀರ ನೀ ದಿಟ ।।೧।। ಮಾರನೆಂಬುದೆ ಬರಿದೆ। ವರೆವುದು। ಧಾರುಣಿಯೊಳು ಯಿರದೆ। ಧೀರನೆ ನಿನ್ನಯ ಊರು ತಾ ನ್ಯಾವುದು। ಸಾರಿದೆ ಯೇನಿತ್ತ। ಕರೆಯುವ ಪೆಸರೇನು ।।೨।। ಲಲನೆ ಯನ್ನಯ ಪೆಸರು। ಮದನನು। ಇಳೆಯೊಳು ಕರೆಯುವರು। ನಲಿಯುತ ಬಂದೆನು। ನಿಲುವನು ತಿಳಿಯದೆ। ತಿಳಿಸೆಲೆ ನಿನ್ನಯ। ಒಲವಿನ ನಾಮವ ।।೩।।

ಭಾಮಿನಿ

ನುಡಿಯು ಕಡೆಗೈ ಮಾಠಬಾಧೆಯ। ತಡೆಯಲಸದಳ ವೆನುತ ಲಾತನ। ವಡನೆ ತಬ್ಬುತ ಮಾರನಾಟಕೆ ಒದಗಲೀರ್ವರದು ।। ನುಡಿಯಲೇನ್ ಪ್ರಾರಾಬ್ಧ ಫಲದಲಿ। ಒಡನೆ ಗರ್ಭವ ಧರಿಸಲಾಕೆಯು। ಪೊಡವಿಯೊಳು ಜನ ತಿಳಿದು ಗುಸು ಗುಸು ನುಡಿದರಲ್ಲಲ್ಲಿ।।೧।।

ಕಾಂಭೋದಿ ಝಂಪೆ ತಾಳ

ಏನು ಕಾಲವು ಬಂತೊ ರಾಣಿಯು ಗುಪಿತದಿಂ। ತಾನೆಯನ್ಯರ ಕೂಡಿ ಗರ್ಭ। ಕ್ಷೋಣಿಯಂ ಧರಿಸಿದಳು ಮಾನವ ದಿನಿತಿಲ್ಲ। ಕಾಣಲಿಕೆ ತಾ ಯೋಗ್ಯಳಂತೆ ।।೧।। ಇನಿತೆಂಬ ನುಡಿಯಲ್ಲಿ ದಿನ

ದಿನದೊಳುಸುರುತಿರೆ । ಜನಪಾಲ ನೀ ಸುದ್ಧಿ ತಿಳಿದು । ಮನದಿ ಬಹು ದುಃಖಿಸಿದ ದೇನು ಮಾಡುವುದೆಂದು। ವನಿತೆಯಳ ಕೋಪದಲಿ ಕರಸಿ॥೨॥ ಕೆಟ್ಟ ಹೆಂಗಸೆ ನಿನ್ನ ದುಷ್ಟಕಾರ್ಯವನ್ನೆಲ್ಲ ಸೃಷ್ಟಿಯಲಿ ಜನರೆಲ್ಲತಿಳಿದು। ಕೆಟ್ಟಮಾರ್ಗದಿ ಕಾಂಬರ್ ದುಷ್ಟಗರ್ಭವ ಧರಿಸಿ। ಎಷ್ಟೆಲ್ಲಹಗರಣವೊ ಮುಂದೆ ॥೩॥ ಮಾನವನು ತೆಗೆದೆ ನೀ ಸಹಭವೆಯ ಮಗನಿಂಗೆ। ರಾಣಿಯನು ಮಾಡಿ ನಾ ಹಿಂದೆ। ಹೀನ ಕೃತ್ಯದಿ ಯನ್ನ ಮೂಗು ಮಾರಿದೆ ನೀನು । ಕಾಣೆ ನಿನ್ನಯ ಭರ್ತನೆಂತೊ ॥೪॥ ತಾಳಿದನೊ ವಿಷಯವನು ಗ್ರಹಿಸಿ ಮನದೊಳಗಿನ್ನೂ । ಬಾಳಿಕೊಂಡಿರಲೆಂದು ಬಿಟ್ಟ । ಖೂಳ ಹೆಂಗಸೆ ನಿನ್ನ ಸೀಳುವೆನೆನುತಿರಲು। ಕಾಲ ಗತಿಯಲಿ ಕುರುಡ ಬಂದ ॥೫॥

ಸಾಂಗತ್ಯ ರೂಪಕ ತಾಳ

ಧರಣಿಪ ನೀ ನಿಂದು ತರುಣಿಯ ಜರೆಯುತ್ತ । ಪರಿ ಪರಿ ಹಿಂಸೆಯ ನೀಡುತ್ತಲಿಹುದು। ಸರಿಯಲ್ಲ ನಿನ್ನಯ ನಡತೆಯ ಗ್ರಹಿಸಿಕೊ। ಇರದಿ ತಾ ಮತ್ತೆ ತಾನಿಂದು ॥೧॥ ಸ್ಮರನ ಉತ್ಸಹವೆಂದು ಮೆರೆವ ಧರ್ಮವ ಬಿಟ್ಟು। ಪರಿ ಮೃಗ ಧರ್ಮಕ್ಕೊ ಮಿೂರಿ । ತರುಣಿಯರ್ ಪುರುಷರು ಇರದ ತಾಪಗಳನ್ನು । ಪರಿಹರಿಸಿ ಕೊಳ್ಳಿರ್ ನೀವೆಂದು ॥೨॥ ಇಚ್ಛೆ ಬಂದವರನ್ನು ಮೆಚ್ಚಿ ಕೂಡಲು ಬಿಟ್ಟೆ। ಸ್ವಚ್ಛದಾ ಧರ್ಮವ ತೊರೆದು। ಹುಚ್ಚರಂತಾಜ್ಞೆಯ ಕೊಟ್ಟಕಾರಣ ವಿಂದು। ಎಚ್ಚರ ಗೊಂಬುವುದು ಮುಂದು ॥೩॥

ಭಾಮಿನಿ

ಅಂದ ನೆಂದುದ ಕೇಳುತಾ ಕ್ಷಣ। ಹಿಂದು ಮುಂದನು ತಿಳಿಯುತಾಗಲೆ। ಮಂದಗಮನೆಯ ಸಲಹುತೀರ್ದನು ಬಹಳ ವ್ಯಥೆಯೊಳಗೆ। ಅಂದ ನೀತನ ದಿಟ್ಟ ನಿಲುವನ। ಗಿಂದು ಯಾವುದೊ ಮಮತೆ ತೋರ್ಪುದು । ಮಂದ ಗಮನೆಯ ಮೇಲೆ ಮಮತೆಯೆ ದಿಂದು ಜಿನುಗುವುದು ॥೧॥ ಎಂದೊ ಎನೋ ಯಾವ ಜನ್ಮವ । ಹೊಂದಿಕೊಂಡಿತೊ ತಿಳಿಯಲಾಗದು । ಇಂದಿರೇಶನೆ ಬಲ್ಲ ನೆನುತಲಿ ಮನದ ಗೊಂದಲದಿ॥ ಮುಂದಕೀ ಪರಿ ಮಾರನುತ್ಸವ। ಹಿಂದೆ ನಡೆದಂತೆಲ್ಲಪ್ರಜೆಗಳು। ಹೊಂದಿ ಕೊಂಬುದು ನಿತ್ಯ ಧರ್ಮದೊಳೆಂದು ತಿಳಿಯುವುದು ॥೨॥

ಕಾಂಭೋದಿ ಝಂಪೆತಾಳ

ಮತಿ ಚತುರೆ ಹೊತ್ತಿರುವ ಹಿತದ ಗರ್ಭವನಲ್ಲಿ। ಕ್ಷಿತಿಯೊಳಗೆ ತಾನಂದು ಇಳುವೆ । ಹಿತ ದಿಂದ ತಾ ಶಿಶುವ ಗುಣವಂತೆ ಯನ್ನುತಲಿ। ವ್ಯಥೆಯ ನೂನದಿ ಪೊರೆಯು ತಿರಲು ॥೧॥ ಗುಣವಂತೆ ದಿನ ದಿನದಿ ಬೆಳೆಯುತ್ತ ಲಿರುತಿರಲು। ಜನಪತಿಯು ಮೈನಾಂಕನೆಂಬ। ಪೃಥ್ವಿ ನೇಪಾಳದಲಿ ವಿಷ್ಟರವ ನೇರಿ ತಾ। ಚಿತ್ತ ಹರುಷದೊಳಂದು ಮೆರೆದ ॥೨॥ ಪಥು ಮಾಂಕ ನೆನ್ನ ಪಿತನೊದಗಿ ಬರೆ ಮುದಿ ತನವು। ಅಧಿಕಾರ ವೆನಗಿತ್ತದವನು। ವಿಧಿ ವಶದಿ ತೆರಳಿದನು ಪದುಮಾಕ್ಷಪುರಕಿನ್ನು। ಪಥುಳಿಗರು ನೇಪಾಲ ಜನರು ॥೩॥ ಆದ ಕಾರಣ ನಾನು ಮೋದ ಮಿತ್ರನ ಕೂಡಿ। ಮೇಧಿನಿಯ ಸಂಚರಿಸು ತಿನ್ನು। ಹಾದ ಬೇಸರವನ್ನು ಸಾಧು ತನದಲಿ ಕಳೆದು। ಈ ದಿನವೆ ಯನು ತಂದು ಪೊರಟ ॥೪॥

ಕೇದಾರಗೌಳ ಅಷ್ಟತಾಳ

ಸೃಷ್ಟಿಪ ನಾ ದಿನವಿಷ್ಟು ಮಿತ್ರನ ಕೂಡಿ। ಸೃಷ್ಟಿ ಹಲವನು ದಾಟಿಯೆ। ಮೆಟ್ಟಿಯೆ ಮಾಗಧ ಸೃಷ್ಟಿಯೊಳ್ಯೆತರೆ। ಹುಟ್ಟುಕುರುಡ ನಿತ್ತಲೂ॥೧॥ ಬಾಲಕ ಹಿಡಿದಹ ಕೋಲಿನ ಸಹಾಯದಿ। ಮೇಲಿ ಪಥವ ಹಿಡಿದು। ಬಾಳನು ಕಳೆಯಲು ಮಾರ್ಗದಿ ಬರುತಿರೆ। ಬಾಲಕ ನಿಂತೆಂದನು॥೨॥ ಚೂತ ವೃಕ್ಷದ ತೋಪು ಆತು ನಿಂದಿದೆ ಇಲ್ಲಿ। ಚೂತ ಫಲದಾಸೆಯಿಂದ। ಚೂತ ಫಲವನು ತಾನು ತರುವೆ ಯನು ತೆನ್ನೆ। ಜಾತಾಂದ ನೆಂದ ನಿಂತು॥೩॥ ಇಲ್ಲ ಕೇಳ್ ಫಲ ಪುಷ್ಪ ವೃಕ್ಷದೊಳ್। ಚಲ್ವನೆ ಬರಿ ಭ್ರಮಣೆ। ಸೊಲ್ಲಿಸೆ ಕೇಳದೆ ಅಲ್ಲೆಗೈ ತರು ತಂದು। ಎಲ್ಲ ವೃಕ್ಷವ ಹುಡುಕೆ॥೪॥ ದಡಿಗ ವಾಗಿದೆ ತೋಟ ವೆಲ್ಲೆಲ್ಲು ಹುಡುಕಲು। ತಡಕಲಾರದು ಫಲವು। ಹುಡುಗನು ಮರಳಿಯೆ ಕುರುಡಗೆಂದನು ಸತ್ಯ। ನಡೆಸಿದ ಕಾರ್ಯವನು॥೫॥ ಕುರುಡು ಮತ್ ಬಾಲನ ವಚನದ ಪರಿಯನ್ನು। ಧರಣಿಪ ಕೇಳುತಲಿ। ಅರಿತ ತಾ ನೀತನು ಕುರುಡನಾದರು ಮತ್ತೆ। ಪರಿಪೂರ್ಣ ಜ್ಞಾನಿಯೆಂದು॥೬॥

ಬೇಗಡೆ ಅಷ್ಟತಾಳ

ಕುರುಡ ಯಾವೆಡೆ ಗಮನ ನಿನದಿಂದು। ಬಾಲನೊಡನೆಯೆ। ಪುರದ್ಯಾವದು ವಸತಿಗದು ಇಂದು। ಪೊರದ ಮಾತಾ ಪಿತರ ದಾರದು। ಕುರುಡ ತನಕಿದು ಮೂಲ ಕಾರಣ। ನಿರತ ರಕ್ಷಿಪದಾತನಾರದ। ವರದರುದುವೆ ಕೇಳಲಿಚ್ಛಿಪೆ॥೧॥ ದೇಶ ಜನನಕೆ ಕಾಂಭೋಜ ಮದಲಲ್ಲಿ। ಕಾರಣಾಂತರ।ವಾಸ ಕಿದುವೆ ಮಗಧ ಕಡೆಗಿಲ್ಲಿ। ಗ್ರಾಸ ಹೊತ್ತಿಗೆ ಕೊಡುವ ನೃಪವರ। ತೋಷ ನೂನದಿ ಪಡೆವೆ ನಾನೀ। ಈಸು ಬಾಲಕ ಗರ್ಧ ಕೊಡುತಲಿ। ವಾಸಿ ಯಿಂದಲಿ ನಡೆಯುತಿಹೆ ಇಲ್ಲಿ॥೨॥ ಹುಟ್ಟುಕುರುಡನು ಕೇಳು ನಾನಿನ್ನು। ಚತುರ ಮತಿಯಂ। ದಷ್ಟು ಜನರದು ಕರೆವರೆನ್ನನು। ಹುಟ್ಟು ಕಾರಣ ಜನನಿ ಜನಕರು। ತಟ್ಟನೊರೆಯಲ ಸಾಧ್ಯವಾಗಿದೆ। ಹುಟ್ಟಿದಾಗ ಶಿಶುವ ತನದಲಿ। ದಿಟ್ಟೆ ಸ್ಯಿಂಗಿಯೆ ತಾಯಿ ಸರಿಸಮ॥೩॥ ಯಾರು ಯನ್ನ ವಿಚಾರಿಪ ಧೀರ। ನಿನ್ನ ಜನನಕೆ। ಧಾರಿಣಿಯದ್ಯಾವುದು ಪೂರ। ಬೋರನೊರೆವುದು ಜೊತೆಯಳಿಹನಾರ್। ಸಾರುತಿ ಕಡೆ ಬರಲು ಕಾರಣ। ಚಾರು ನಾಮವ ದೇನ ದೆಂಬುದ। ಪಾರಮಾರ್ಥದಿ ವರೆಯೆ ಕೇಳುವೆ॥೪॥ ಧರಣಿಯದು ನೇಪಾಲ ಎನದಿನ್ನು। ಅಧಿಕಾರಿಯೆ ನಾ। ಕರೆವರೆನ್ನ ಮ್ಯೆನಾಂಕ ನೆನುತಿನ್ನು। ಅರಿತೆ ನಿನ್ನಯ ಸಕಲ ಚರಿತೆಯೆ। ಹರುಷ ದಿಂದ್ಯೆ ದೆನ್ನ ನಾಡಿಗೆ। ಬರುವುದಾದರೆ ಹೊತ್ತದೆರಡಕೆ। ಇರದೆ ಕೊಡುವೆನು ಗ್ರಾಸವನು ನಾನು॥೫॥

ಭಾಮಿನಿ

ನುಡಿಗೆ ಸಮ್ಮತಿಯನಲು ಧರಣಿಪ। ಹುಡುಗ ನೊಡನೆಯೆ ಕಳುಹಿಕೊಟ್ಟನು। ದಡಿಗ ಮಿತ್ರನ ವೆರಸುತಾಗಲೆ ಬಹಳ ಸಡಗರದಿ॥ ಪೊಡವಿ ಪತಿಯಾ ಸೂರ್ಯದತ್ತನು। ವಡನೆ ಕಾಣಲು ಬಹಳ ಹರುಷದಿ। ಬಿಡದೆ ಬಹುಪರಿ ಮನ್ನಿಸಿದ ನಾ ಮ್ಯೆನಾಂಕ ಭೂಪನನು॥೧॥ ಕೆಲವು ದಿನ ಪರಿಯಿರಲಿಕ್ಕಲ್ಲಿಯೆ। ಲಲನೆ ಯಾ ಮತಿಚತುರೆ ಕುವರಿಯು। ಕಲಿತ ಯೌವನ ದಿಂದ ಶೋಭಿಪ ಪರಿಯ ನಿವಕಂಡ॥ ಲಲನೆ ಯನಗೆಣೆ ಚೆಲುವ ಯೌವನ। ವಲಿದು ಕೊಂಡೆನ ದಾದರಿವಳನು। ಒಲಿದು ಮದುವೆಯ ದಾಗುವಾ ಪರಿ ಬೇರೆ ಬೇರಿಹುದು॥೨॥

ಸೌರಾಷ್ಟ್ರ ತ್ರಿವುಡೆ ತಾಳ

ಕಾಲ ತಾನೇ ವದಗಿ ಬಂದರು । ಮೇಲೆ ತಿಳಿಸುವೆ ಯನ್ನ ಮನವನು । ಹೇಳಿ ಮಾವಗೆ ಹೊರಟನೂರಿಗೆ। ಇಳೆಯ ಪಾಲ ॥೧॥

ಕೇದಾರಗೌಳ ಝಂಪೆತಾಳ

ಧರಣಿಪನು ದಿನ ದಿನದಲಿ। ಕುರುಡನಿಗೆ। ವರದಂತೆ ತಾ ಕೊಡುತಲಿ। ಇರುತಿರಲು ಕೆಲ ದಿನದಲಿ। ಹಯ ವಂದ। ತರುತ ವಿಕ್ರಯಕೆನುತಲಿ॥೧॥ ಅರಬಿಯ ನೋರ್ವನಂದು। ಪುರ ಮಧ್ಯ। ತುರುಗವನು ನಿಲಿಸುತಂದು । ಇರುವು ದೈ ಲಕ್ಷಣದೊಳು । ಶ್ರೇಷ್ಟದೊಳು । ಇರುವುದೈ ಗುಣವಿದರೊಳು ॥೨॥ ಸಾರುತಿರ ಲಾಗದನನು । ಕೇಳುತಲಿ। ಸಾರು ತಾ ನೃಪನೆಡೆಯನು। ದೂರಿದರು ಬಹು ವಿಧದಲಿ। ಪುರ ಜನರು। ಚಾರು ಹಯವಿದು ಯನುತಲಿ॥೩॥

ಭಾಮಿನಿ

ತುರಗ ದಾ ಪರಿ ಕೇಳ್ದು ನೃಪತಿಯು। ಕರೆಸುತಾಗಲೆ ಯಶ್ವ ಪಾಲನ। ಪರಿ ಕಿಸುತಾ ಪುರದ ಜನಗಳು ವರೆದ ಪರಿ ಸತ್ಯ ॥ ಪರಿಕಿಸುವೆ ತಾನಂದ ನೊಳಗಿದ। ಪರಮ ಜ್ನಾನವ ನೆನ್ನುತಾಗಲೆ। ಕರೆಸುತಾಗಲೇ ಹಯದ ಮರ್ಮ ವರೆಯ ಬೇಕೆನಲು॥೧॥

ಮುಖಾರಿ ಆದಿತಾಳ

ವಸುಧೆ ಪಾಲಕನೆಂದ ನುಡಿಗೆ। ಕುರುಡ ತಾ। ಹಸನದಿ ಸ್ಪರ್ಶಿಸಿ ಮೇಗೆ। ಉಸುರಿದ ನಾಕ್ಷಣ ಕುದುರೆಯು ಬಾಲ್ಯದಿ । ಹೇಸರ ಕತ್ತೆಯ ಕ್ಷೀರವ ಕುಡಿಯುತ । ವಸುಧೆಯೊಳುಳಿದಿದೆ ಲಕ್ಷಣ ದೊಳಗಿದೆ ॥೧॥ ನುಡಿಯನು ಕೇಳುತ ನೃಪನು । ಆ ಅರಬಗೆ । ಕೊಡುತಲಿ ದ್ರವ್ಯವ ತಾನು । ಪಡೆಯುತ ಕುದುರೆ ಯೋಚಿಸಿ ಮನದಲಿ । ಒಡನೆಯೆ ಕಳುಹಿದ ಗುಪಿತದಿ ಚರರನು । ಪೊಡವಿಯೊಳ್ ಮರ್ಮವ ನರಿಯುತ ಬರಲಿಕೆ ॥೨॥

ಕಾಂಭೋದಿ ಝಂಪೆ ತಾಳ

ಇತ್ತಲಾ ಪೃಥ್ವಿಯಳು ಸತ್ಯ ವೇನೆಂದರಿಯೆ। ಅತ್ತಲಾ ಚಾರಕರು ಬರಲು। ಅತ್ತಲಾ ರವಿದತ್ತ ಚಿತ್ತದಲಿ ತಿಳಿದು ಈ । ಹೊತ್ತಿನಲಿ ಮತಿ ಚತುರೆ ಮಗಳು ॥೧॥ ಅತಿಶಯದ ಗುಣವಂತೆ ಷೋಡಶಾಬ್ಧದೊಳಿಹ । ಅತಿ ಶಯದಿ ಮೆರೆಯುತ್ತಲಿರಲು । ಸತಿಯಳಿಗನುಜಳಾ ಸುತನು ಮೈನಾಂಕನು। ಪೃಥ್ವಿಪಾಲಕ ತಕ್ಕ ವರನು ॥೨॥

ಭಾಮಿನಿ

ವರೆಯು ತಾತನ ಮನವ ಒಲಿಸುತ । ವಿರಚಿಪೆನು ಮದುವೆಯನು ಬೇಗದಿ । ಹರುಷದೊಳಗೆನುತ ಬರುತಿರಲರಿತು ಮೈನಾಂಕ ॥ ಬರವ ದೇನೆನೆ ಪರಿಯ ನೊರೆದರೆ। ಇರದಿ ಗ್ರಹಿಸಿಯೆ ನಡೆಸಿ ಕೊಡುವೆನು। ಪರಿಯ ನೊರದರೆ ಬಂದ ಪರಿಯನು ವಿವರದಿಂದಲ್ಲಿ ॥೧॥

ಕೇದಾರಗೌಳ ಅಷ್ಟತಾಳ

ಮಾತುಳ ನಿಮ್ಮಯ ಪ್ರೀತಿಯ ವಚನವ। ಆತು ಕೇಳುವೆನೀಗಲು। ಆತು ಸುಂದರಿ ನಿಮ್ಮ ಬಾವನ। ಮಗನಿಗೆ ಜಾತಳೆಂದೆನಿಸಿಹಳು॥೧॥ ಆದ ಕಾರಣ ನೀವು ಕುವರಿಯ ನೆನಗೀವ। ಆದ ಮನವದೊಳ್ಳಿತು। ಆದರಾಕೆಯ ನಮ್ಮ ನಾಡಿಗೆ ಕಳುವೆ। ಮೋದದಿ ನಾ ನೋಡಿಯೆ॥೨॥ ಮನದಿರವನು ನಾನು ವರೆಯುವೆ ಕಡೆಯಲ್ಲಿ। ಮನದಿ ಬೇಸರ ತಾರದೆ। ವನಿತೆಯಳ್ ನೀವು ಕಳುಹಿದರಿಲ್ಲಿಗೆ। ಎನೆ ಒಪ್ಪುತಲಿ ತೆರಳಿದ॥೩॥

ದ್ವಿಪದೆ

ತುರಗವನು ಪರಿಕಿಸಲು ಬರದಿ ತಾವ್ ತೆರಳಿ। ಅರಿದು ಮರ್ಮವ ನಿಂತು ವರದರಾಗ್ ಮರಳಿ॥೧॥

ಮುಖಾರಿ ಆದಿತಾಳ

ಕೇಳಯ್ಯ ದೊರೆಯೆ ನೀನು। ನಾ ಪೇಳ್ವ ನುಡಿಯ। ಕೇಳಯ್ಯ ದೊರೆಯೆ ನೀನು॥ ವೇಳೆಯ ಕಾರ್ಯದಿ ಹಾಳನು ಮಾಡದೆ। ಸಾಲಿನೊಳ್ ನಡೆಯುತ ಲೀಲೆಯೊಳರಿತೆವು॥ ಜಾಲದ ಕುದುರೆಯ ಮೂಲದ ಮರ್ಮವ। ಹೇಳಲು ಯಮಗದು ಬಹುತರ ತೋಷವು॥೧॥ ತುರಗದ ಮೂಲ ಕೇಳು। ಧಾರಿಣಿಯೊಳಗದು। ಪೊರೆದ ತಕ್ಷಣವೆ ಹಾಳು। ತುರಗದ ತಾಯಿಯು ಮರಣವನ್ನೈದಲು। ತುರಗಕೆ ಕತ್ತೆಯು ಕ್ಷೀರವ ಕುಡಿಸಿತು। ವರದರಾ ಪುರದಲಿ ಪರಿ ಪರಿ ಜನಗಳು। ಇರುವುದನರಿತೆವು ಅರಿತುಕೊ ಮನದಲಿ॥೨॥

ಕಾಂಭೋದಿ ಝಂಪೆ ತಾಳ

ಚಾರಕರ ನುಡಿ ಕೇಳ್ದು ದೊರೆಯಾಗ ಹರುಷದಲಿ। ಕುರುಡನ ಜ್ಞಾನವನು ನೆನೆದು। ಧರಣಿಯಲಿ ತೋರುತಿಹ ಸಕಲ ವಿದ್ಯೆಗಳಲ್ಲಿ। ಪರಿಜ್ಞಾನ ಲೇಸು ಲೇಸೆನುತ॥೧॥ ಇರಲಿಕಿರ ನೃಪನಿತ್ತ ತರಣಿ ಧತ್ತನು ತಾನು। ಪುರಕೈದು ಹರುಷದಿಂ ಮುಂದು। ಕರೆಯುತ್ತ ಲಾಗಲಿ ಮತಿ ಚತುರೆಯನು ಕರೆದು। ತೆರಳು ಗುಣವಂತೆಯನು ಕೂಡಿ॥೨॥ ಪೊಡವಿ ನೇಪಾಲದಲಿ ಮೈನಾಂಕ ಕುವರಿಯನು। ವಡನೆ ತಾ ನೊಪ್ಪುವೆ ನೆಂದು। ನುಡಿದಿರುವ ನನ್ನಲ್ಲಿ ಕುವರಿಯನ್ನೊಡಗೊಂಡು। ತಡೆಯದೆಲೆ ನಡೆಯಂದನಲ್ಲಿ॥೩॥

ಭಾಮಿನಿ

ನೀನು ಸುತೆಯಳ ಕೂಡತಲ್ಲಿಗೆ। ಸಾನುರಾಗದಿ ತೆರಳೆ ನೃಪವರ। ಮಾನಿನಿಯನವ ನೋಡ್ದು ಮನಸಿನ ಪರಿಯ ನೊರೆಯುವನು॥ ಸಾನುರಾಗದಿ ಕಳುಹಲಲ್ಲಿಗೆ। ಜಾಣೆ ಕುವರಿಯು ಕೂಡಿ ಬಂದಳು। ಮಾನ ವಾಧಿಪ ಕಂಡು ಮನ್ನಿಸು ತೊಳಗೆ ಕಳುಹಿದನು॥೧॥

ಸಾಂಗತ್ಯ ರೂಪಕತಾಳ

ಕ್ಷಿತಿ ಪಾಲ ನಾಕ್ಷಣದಿ ಮತಿ ಚತುರೆ ಸುತೆಯನ್ನು। ಹಿತದಿಂದ ಪರಿಕಿಸಲಿ ಕಲ್ಲಿ। ಚತುರ ಮತಿಯಲಿ ಪೇಳೆ ಗುಣವಂತೆ ಯೋರ್ವಳ। ಅತಿಶಯದೊಳೆನ್ನೆಡೆಗೆ ಕಳಹು॥೧॥ ತರುಣಿ

ನೋರ್ವನೆ ಪರಿಕಿಸಿ ನಾ ಮುಂದೆ । ವರೆವೆ ತಾ ನಿನ್ನಲ್ಲಿ ನಿಜವ । ಪರಿಬೇಧ ವೆನ್ನಲ್ಲಿ ಇರಿಸದೆ ತರುಣಿಯು। ಇರುವ ಪರಿಯಲಿ ನಿಜವ ನೊರೆವೆ ॥೨॥

ವಾರ್ಧಿಕ

ಕುರುಡ ನೀ ತೆರದೊಳಗೆ ಕಟ್ಟಲೆಯ ನೊರೆಯಲು। ತರುಣಿಯ ತಾಯಿಯೊಳ್ ಧರಣಿಪನು ಪೇಳಲಿಕೆ। ಹರ ಹರ ತರುಣಿಯಳ ನೀ ತೆರದಿ ಸಜ್ಜೆಯೊಳು ಪರಿಕಿಸುವ ಪರಿ ಕಾಣೆನು ॥ ಕುರುಡ ತಾ ನಾದರೆಯು ಪುರುಷ ತಾ ನಾಗಿರುವ। ಇರದು ಮನ ಒಪ್ಪದಿರೆ ಬೇಡೆನಲು ತರುಣಿಯಳ। ಪರಿಹಾರ ವಿದಕ್ಕಿಲ್ಲವಾದುದಾಗಲಿ ಮುಂದೆ ಕಳುಹುವೆನು ನಾ ತನಯಳ ॥೧॥

ಭಾಮಿನಿ

ತರುಣಿ ಯಾ ಗುಣವಂತೆ ತಾಯಿಯು। ತರುಣಿಯಳ ಪರಿ ತಿಳಿವ ನವವಿಧಿ। ಧರಣಿಯೊಳಗಿದ ಕೇಳ್ದ ಜನರಿಗೆ ಬಹಳ ಪರಿಹಾಸ್ಯ॥ ಇರದ ದೆಲ್ಲಿಯು ಕಾರ್ಯವಿಧದೊಳು ಅರಿಯ ಲಾಗದದೆಂದು ಮಗಳಿಗೆ। ವರದಲೀ ತೆರದಿಂದ ಬಿಡಲದು ಕೊರತೆ ನಮಗಿನ್ನು ॥೧॥

ತೋಡಿರಾಗ ಅಷ್ಟತಾಳ

ಏನೆಂಬೆ। ತರುಣಿ। ಏನೆಂಬೆ। ಏನೆಂಬೆ ನಿನ್ನನು ನೃಪತಿ ತಾ ಹೀಗೆ। ಮಾನಿನಿಯನ್ನು ಪರಿಕಿಸಿ ಮೇಗ। ಅನಪ॥ ಸ್ವಚ್ಛದ ಮನದೊಳ ಗಂದ ತಾನೆಂದ। ಬಿಚ್ಚುತ ಲುಡುಗೆಯ ತೊಡಿಗೆಯ ಮುಂದು। ಅಚ್ಚವಾ ಜನನದ ಪರಿಯೊಳು ನೀನು। ಅಚ್ಚರಿ ಪಡದೆಲೆ ನಿಲ್ಲಲು ನಾನು ॥೧॥ ತಡಕುತ್ತ ನಿನ್ನನು ಪರಿಕಿಪೆ ನೆಂದು। ನುಡಿದುದ ಕೇಳುತ್ತ ಲಲನೆಯು ಮುಂದು। ಬಿಡಿಸಿಯೆ ಶ್ಯಾಲೆಯ ಕುಪ್ಪಸಗಳನು। ಒಡವೆ ವೈಖರಿಗಳ ತೆಗೆದು ತಾ ನಿನ್ನು ॥೨॥

ಬೇಗಡೆ ಅಷ್ಟತಾಳ

ಹುಡುಗಿ ಯಾಗಲೆ ಸಿದ್ಧವೆನ ಲಂದು। ಕುರುಡ ನಾ ಕ್ಷಣ। ತಡುಕಿದನು ಕರದಿ ತಲೆಯಿಂದು। ಬಿಡದಲಾಕೆಯ ಕಪೋಲ ಧ್ವಯವನು। ಕಡೆಗೆ ನಾಸಿಕ ತುಟಿಗಳೆರಡನು। ಕಡೆಗೆ ಕಂಠದ ಸುತ್ತದೊಳಯವ। ಬಿಡದೆ ಕುಚದ್ವಯ ಪೂರ್ಣ ತುದಿ ವರೆಗೆ ॥೧॥ ಮುಟ್ಟುತಾಕೆಯ ಪೂರ್ಣ ಪರಿಯನ್ನು। ಅರಿಯುತಲಿ ಕಡೆ। ದಿಟ್ಟನಾಭಿಯ ದಾಳದ ಗಲವನು। ಗಟ್ಟಿ ಮನದಲಿ ಕಟಿ ನಿತಂಬವ। ಮುಟ್ಟಿ ತಿಳಿದವ ನ್ಯೂನ ಬಿಡದಲೆ। ತಟ್ಟನಾಗಲೆ ತೊಡೆಯದಳತೆಯ। ನಿಟ್ಟು ಕಡೆ ಗಾ ಪಾದ ದ್ವಯ ಪರಿ ॥೨॥

ಕೇದಾರಗೌಳ ಅಷ್ಟತಾಳ

ಮುಟ್ಟುತಾ ಕುರುಡನು ಇಷ್ಟದಿ ಸರ್ವಾಂಗ। ತಟ್ಟನೆ ತಿಳಿದು ಮರ್ಮ। ತೊಟ್ಟು ನೀ ವಸ್ತ್ರವ ನೆಡೆಯಂದು ನೃಪತಿಗೆ। ಗುಟ್ಟಲಿ ಹೇಳಿದನಂದು ॥೧॥

ಭಾಮಿನಿ

ಬೆಚ್ಚದಿರ ಲಾ ಗಲ್ಲಿ ತರುಣಿಯು। ಅಚ್ಚ ಹಾದರ ಸಂತತಿಯಳಿದು। ಸ್ವಚ್ಛ ದವಳೊಳಂಗ ಲಕ್ಷಣ ಮೆಚ್ಚುವಂತಿಹುದು॥ ಅಚ್ಚನಾಸಿಕ ನಯನ ತುಟಿಗಳು। ಸ್ವಚ್ಛ ಕಂಠ ಕಪೋಲ ನಾಭಿಯು। ಮೆಚ್ಚುವಾ ಕುಚ ನಮಿತ ವಾಗಿದೆ ಸಕಲದಂಗಾಂಗ ॥೧॥

ಬೇಗಡೆ ಅಷ್ಟತಾಳ

ಚಾರು ಲಕ್ಷಣ ಪರಿಯ ನರಿತುದನು। ನೃಪವರನಿಗೆ। ಪೂರ ಪೂರ್ವದ ಪರಿಯ ನೊರೆಯವೆನು। ನಾರಿ ಮಣಿಯಳ ಜನನ ಕಾರಣ। ಸೇರಿ ಕೊಂಡಿದೆ ಪೂರ ಹಾದರ। ನಾರಿಯೋರ್ವನುಳು ಹಿಂದಕೆ। ವಾರಿಜಾಕ್ಷಿಯ ತಾಯಿ ಜನನಿಯು ॥೧॥ ಅಂಗ ಲಕ್ಷಣ ತುಂಬಿಕೊಂಡಿಹಳು। ಧರಣಿಯೊಳಗಿ। ಭೃಂಗಕುಂತಲೆ ಗೆಣೆಯ ದಾರಿಹಳು। ತುಂಗ ಕುಚೆಯಳ ಗರ್ಭದಲ್ಲಿಯೆ। ಭಂಗವಿಲ್ಲದೆ ಶಿಶುವು ಜನಿಸಿಯೆ। ತುಂಗ ಬಲ ಸುಮನಸರ ದರುಶನ। ಅಂಗನಾ ಮಣಿಯಿಂದ ದೊರೆವುದು ॥೨॥ ಎನುತ ಕುರುಡನು ವರೆಯಲಾಗಲ್ಲಿ। ಅರಿತು ಮನದೊಳು। ಜನಪತಿಯು ತಾ ನೊರದ ಮತ್ತಲ್ಲಿ। ವನಿತೆ ಯಾ ಮತಿ ಚತುರೆ ಗೆಂದನು । ಮನಕೆ ಒಪ್ಪಿಗೆ ನಿಮ್ಮ ಕುವರಿಯು। ಘನ ಮೂರ್ತದಿ ಮದುವೆಯಾಗುವೆ। ವನಿತೆ ಪಿತನನು ಕರೆಸುತಿಲ್ಲಿಯೆ ॥೩॥

ಭಾಮಿನಿ

ಎನುತ ಲಾಗಲೆ ನೃಪತಿ ಮುಂದಕೆ । ಘನತರದ ಲಾ ಶುಭ ಮೂರ್ತದಿ। ವನಿತೆಯಳ ಕರ ಗ್ರಹಣ ಚೈತ್ರ ಶುದ್ಧದಲಿ॥ ಮಿನುಗುತಿಹ ನಕ್ಷತ್ರ ತದಿಗೆಯು। ಎನುತ ದೆಲ್ಲರ ಕರೆಸಿ ವಿಭವದಿ। ವನಿತೆಯನು ತಾ ಮದುವೆ ಯಾದನು ಬಳಿಕ ಲಾಗಲ್ಲಿ॥೧॥

ಕಾಂಭೋದಿ ಝಂಪೆ ತಾಳ

ಭೋದನೆಂಬುವನಲ್ಲಿ ತರುಣಿಯಳ ವೃತ್ತಾಂತ। ಮೇಧಿನಿಯೊಳ್ ತಿಳಿದು ಬಾ ಯಂದು। ಮೇಧಿಪನ ನಾಜ್ಞೆಯೊಳ್ ಪೊರಟ ತಾ ನಾ ದಿನದಿ। ಸಾಧಿಸಿದ ಮಾಗಧದಿ ಗುಪಿತ ॥೧॥ ಅರಿತು ತಾಯಿಯ ಮರ್ಮ ಅರಿಯಲಜ್ಜಿಯ ಕಥೆಯ । ಪೊರಟನಾ ಕಾಂಭೋಜ ಪುರಕೆ। ತರುಣಿಯಳ ಮರ್ಮವದ ನರಿಯಳವ ಸ್ತ್ರೀ ವೇಷ। ಧರಿಸಿದರೆ ಸುಖಕರವದೆಂದು ॥೨॥

ಮಧ್ಯಮಾವತಿ ತ್ರಿವುಡೆ ತಾಳ

ಸುದತಿ ವೇಷವ ನಾಂತು ಬೋಧನು। ಮುದದೊಳಾ ಕಾಂಭೋಜ ಪುರದಲಿ। ಚದುರ ತನದಲಿ ರಾಜ ಮಾರ್ಗದಿ। ಸುದತಿಯಾಗಿಯೆ ಬರುತಿರೆ। ಸಕಲ ಜನರು ॥೧॥ ನೋಡಿ ಭ್ರಮೆಯನು ತಾಳುತಾಗಲೆ। ನಾಡ ಮೂರ ರೊಳಿಕೆ ಗೆಣೆಯಹ। ಜೋಡಿ ಸ್ತ್ರೀಯಳ ಕಾಣೆವೆನ್ನುತ। ಆಡುತೀರ್ದರಲ್ಲಿ ಸ। ಗಾಢದಿಂದ ॥೨॥ ಕಾಮನಬ್ಬದಿ ಮತಿ ಚತುರೆ ತಾ। ಪ್ರೇಮ ದಿಂದನ್ಯರನು ಕೂಡಿಯೆ। ಕಾಮಫಲ ಗುಣವಂತೆ ಯೆಂಬೊಳು। ಭೂಮಿಯಲ್ಲಿಯೆ ಜನನವು। ಮಗಧದಲ್ಲಿ ॥೩॥ ಆಕೆ ಮಾತೆಯ ಜನನ ಪರಿಯನು। ಲೋಕದೊಳು ತಾ ನರಿಯ ಲೋಸುಗ। ಆಕೆ ನೆಲೆ ಕಾಂಭೋಜ ಭೂಮಿಗೆ। ಏಕ ಮನದಲಿ ಬಂದನು। ಮಾರ್ಗದೊಳಗೆ ॥೪॥

ಕಂದ

ಇಂತೆಂದು ಬೋಧ ತಾ। ದಂತಿ ಗಮನದಿ ಬರೆ ನರ್ತಕಿಯಳು। ಕಂತು ವಿನ್ನರಗಿಣಿಯಂ। ತೆಂದು ಭ್ರಮಿಸಿ ನಾಕೆಯೊಳಿತೆಂದಳು ॥೧॥

ಬೇಗಡೆ ತ್ರಿವುಡೆ ತಾಳ

ಭೃಂಗ ಕುಂತಲೆ ಮೋದನನ್ನಲ್ಲಿ। ತುಂಗ ಕುಚಯಗೆ ಕರೆದು ಮತ್ತಲ್ಲಿ। ಸಂಗಡನೆ ತಾ ಕರೆದು ಮನೆಯಲ್ಲಿ। ಶೃಂಗಾರಕೆ ಬಂಗಾರ ವಿತ್ತಲ್ಲಿ। ಸಂಗ ಸಖಿ ನೀ ನುಡುತ ತೊಡುತಲಿ। ತುಂಗ ಹರುಷದಿ ನಲಿದು ಕುಣಿಯನೆ। ಅಂಗನಾ ಮಣಿ ನಿಶಿಯ ದೋರಲು। ರಂಗು ಸಜ್ಜಾಗ್ರಹಕೆ ನಡೆದರು ॥೧॥ ತರುಣಿಯೋರ್ವಳ ಸಹಜದವಳಿಲ್ಲಿ। ತರುಣಿ ವೇಷದ ಪುರುಷ ಮತ್ತಲ್ಲಿ। ಬರಲು ರಾತ್ರಿಯು ಮಂಚದೊಳಗ್ಗಲಿ। ವರಗಿ ಕೊಂಡರು ನಿದ್ರೆಗೆನುತಲ್ಲಿ । ಬರಲು ನರ್ತಕಿ ಹತ್ತಿರತ್ತಿರ। ಪುರುಷ ಮೋದನು ದೂರ ದೂರಕೆ। ಸರಿಯ ಲಚ್ಚರಿಯಿಮಮ ಸ್ಪರ್ಷಿಸೆ। ಎರಡು ಕುಚದಲಿ ಕಳಶ ಕಾಣದೆ। ಅರಿತ ಲಾಗಲೆ ಪುರುಷ ನಿವನೆಂದು ॥೨॥

ವಾರ್ಧಿಕ

ಇಪ್ಪ ದೀ ಸಖಿಯಳುಂ ಸಖಿನೋ ತಾನೆಂಬುದಂ। ತಟ್ಟದಾಗಿದು ಮನಕೆ ಬಹುತೆರದಲಚ್ಚರಿ। ಹುಟ್ಟುಸ್ತನ ತುದಿಯ ಮೇಲ್ ಚೊಟ್ಟು ತೋರದ ದಲಿಹುದ ಗಟ್ಟಿಯಾಗಿಯ ತೊರ್ಪುದು॥ ಹೊಟ್ಟೆ ಕೆಳ್ ಬಾಗವಂ ದೃಷ್ಟಿಸ ಲಿಕಿವ ಪುರುಷ। ದುಷ್ಟತಾ ನಿಜವೆಂದು ಗಟ್ಟಿ ಮನದೊಳಗಾಕೆ। ಪೆಟ್ಟ ನಿಕ್ಕುವೆಯನ್ನ ತಾಯಿ ಗೊರೆಯುತ ನಿನಗೆ। ದುಷ್ಟನೆ ತಾಳ್ನೆನಲು ॥

ಭಾಮಿನಿ

ತಪ್ಪ ಕ್ಷಮಿಸಿಯೆ ಸಖಿಯೆ ಯನ್ನನು। ವಪ್ಪದಲಿ ನೀ ಕಾಯ ಬೇಕೆನೆ। ಇಪ್ಪೆ ನಿನ್ನಯ ದಾಸಿ ಯನುತಲಿ ಕಾಡಿ ಬೇಡಿದನು ॥ ಇಪ್ಪ ಮಾನವನ್ನುಳಿಸಿ ಪೊರೆಯೆನೆ। ಅಪ್ಪ ನಿನ್ನಯ ಧೈರ್ಯ ಸಾಹಸ। ಇಪ್ಪ ಪರಿಗಾ ಮೆಚ್ಚಿ ತುಟಿಗಾ ತುಪ್ಪ ಸವರಿದಳು ॥೧॥

ಕಾಂಭೋಧಿ ಝಂಪೆತಾಳ

ತುಪ್ಪ ಸವರುತ ತುಟಿಗೆ ಅಪ್ಪಿ ಮುದ್ದಾಡುತಲಿ। ಇಪ್ಪ ಪೂರಾ ಸುಖದಿ ನಲಿದು। ಒಪ್ಪ ಓರಣದಿಂದ ಲಿರುತ ನಲಲ್ಲಿಯೆ। ಇಪ್ಪ ಸುದ್ಧಿಯ ತಿಳಿದ ಮುಂದು ॥೧॥ ಇತ್ತಲವ ನಿರುತಿರಲು ಅತ್ತ ಲಾ ಮೈನಾಂಕ। ಪತ್ನಿಯಳು ಗರ್ಭವನು ಧರಿಸಿ। ಪುತ್ರಿಯಳ ಪಡೆದಳು ಬಹಳ ಶುಭ ಮೂರ್ತದಲಿ। ಪೃಥ್ವಿ ಪತಿ ಕಂಡು ತಾನಂದು॥೨॥ ಇಟ್ಟನಾ ಕುವರಿಗ ಗಾಗ ಮರ ದರ್ಶಿನಿಯಂದು। ಶ್ರೇಷ್ಟದ ಪೆಸರಿನಿಂ ಕರೆಯೆ। ಸೃಷ್ಟಿ ದ್ವಿಜರಿಗಲ್ಲಿ ದಾನ ದಕ್ಷಿಣೆ ಕೊಟ್ಟು ಇಷ್ಟ ದಿಂದಿರುತಿರುತ ಮುಂದು॥೩॥ ಕಣ್ಣಿಲ್ಲದವನಲ್ಲಿಯೆ ಯನ್ನ ಹುಟ್ಟಿನ ಪರಿಯ। ಮುನ್ನ ತಾ ತಿಳಿಯುವೆ ನೆನುತ। ಚನ್ನದಲಿ ಕರೆಸುತಲಿ ಕುರುಡನಲಿ ಕೇಳಿದನು। ತನ್ನ ಮನ ಪರಿಗಳನ ನಿಂತು ॥೪॥ ಎನ್ನ ಜನನದ ಪರಿಯ ನಿನ್ನು ನೀ ನೊರೆದರದು। ಎನ್ನ ಮನಕದುವೆ ಬಲು ತೋಷ॥ ಎನ್ನ ಲಾಕ್ಷಣ ಕುರುಡ

ಕಿನ್ನನಾಗಿಯೆ ಮನದೊ। ಳಿನ್ನು ತಾ ನೋಚಿಸುತಲೀರ್ದ ॥೫॥ ಸತ್ಯ ತಾ ನೊರೆದರೆ ಮತ್ತೆ ಶಿಕ್ಷೆಯು ಎನಗೆ। ಪೃಥ್ವಿಯಲಿ ದೂರ ನೂಕಿಯೆ ಬಿಡುವ। ಮಿಥ್ಯ ವರೆಯಲಿಕೆನ್ನ ಮನವು ತಾ ನೊಪ್ಪದದು। ಅತ್ತಲಾ ದರೆ ಇತ್ತಲಾಹುಲಿಯು ॥೬॥

ಶಂಕರಾಭರಣ ರೂಪಕ

ಹೇಳಲಾರೆನು। ಜನನ ಪರಿಯ। ಹೇಳಲಾರೆನು। ಹೇಳಿದರೆ ನಿನಗೆ ಕೋಪ। ತಾಳಲಹುದೆ ಯದರ ತಾಪ। ಕೇಳಿ ತಾಪದೊಳಗದೆನ್ನ। ಮೂಳ ಪಾಪಿಯೆಂದು ಜರವೆ ॥೧॥ ಆದುದಾಗಲಿ ಪೇಳ್ಲೆನದನನ್ನು। ಲಾಲಿಸೈ ದೊರೆ। ಆದುದದುವೆ ವೈಶ್ಯ ನಿಂದಿನ್ನು। ಹಾದರದಿ ತಾ ನವ್ವೆ ಕೂಡುತ। ಮೇಧಿನೀಯಳು ನಿನ್ನ ಪಡೆದಳು। ನೀ ದಯದಿ ಯನ್ನ ರಕ್ಷಿಸು। ಆದು ದಾಯಿತು ಮರುಗದಿರು ನೀನು ॥೨॥

ದ್ವಿಪದೆ

ಕುರುಡನೆಂಬುದ ಕೇಳ್ದು ನೃಪನು ತಾ ಕಡೆಗೆ। ತೆರಳೆಂದು ಕಳುಹಿದನು ಮಥಿಸಿ ಮನ ದೊಳಗೆ ॥೧॥ ಜಾತಾಂಧನೆಂದುದಂ ನರಿತು ತಾ ಕಡೆಗೆ। ಮಾತೆಯಂಗ್ರಿಗೆ ನಮಿಸಿ ವಿನಯದಿಂ ಮೇಗೆ ॥೨॥

ಕೇದಾರಗೌಳ ಅಷ್ಟತಾಳ

ಚರಣಕ್ಕೆ ವಂದಿಸಿ ತರಳ ತಾ ವಿನಯದಿ। ಪರಮವಾಗಿಹ ಸತ್ಯವು। ಧರೆಯಲ್ಲಿ ಮೆರೆವುದು ಸಟಿಯು ಅ ನಿತ್ಯವು। ಇರದೆ ತಾ ನಳಿಯುವುದು ॥೧॥

ಭಾಮಿನಿ

ಸತ್ಯವೆಂಬುದು ಗಗನ ಮಣಿಗೆಣೆ। ಕತ್ತಲೆ ಯಾ ಸತ್ಯವೆಂಬುದು। ಏತ್ತ ಪೋದರರದೆಲ್ಲಿ ನೆಲೆಸಲು ಸತ್ಯ ಪೊರೆಯುವುದು ॥ ಧಾತ್ರಿಯೊಳ ಗಾ ಸತ್ಯಕೆಂದಿಗೂ। ಎತ್ತ ನೆಲೆ ಬೆಲೆ ಕಾಣದದುವೆ। ಎತ್ತ ಹೋದರು ನೂನ ಕೀರ್ತಿಯು ಸುಖವು ತೃಣ ವಿರದು ॥೧॥ ಎನ್ನ ಜನನಕ ದಾರು ಕಾರಣ। ಎನ್ನುವಾ ಪರಿ ತಿಳಿವ ತವಕವು। ಮುನ್ನ ಜನ್ಮ ದೊಳೇನು ನಡೆದಿದೆ ಎಂದು ಸತ್ಯದಲಿ ॥ ಚೆಣ್ಣನಲಿ ಸಂಕೋಚ ವಿಡದೆಲೆ। ಇನ್ನ ದುಸರುತ ಪೊರೆಯ ದೆನ್ನಲು। ಇನ್ನು ಮಾತೆಯ ಕಾಲು ಪಿಡಿದವ ಬೇಡಿ ಕೊಂಡನವ ॥೨॥

ಮಧು ಮಾಧವಿ ಏಕತಾಳ

ಜಾತ ತಾ ನೆಂದುದ ಮಾತೆಯು ತಾ ಕೇಳ್ದು। ಆತು ತಕ್ಷಣದಲ್ಲಿ ಕಳವಳ ತಾಳ್ದು। ನೀತಿಯ ನೀ ನಿಂತು ಕೇಳ್ಬುದು ಕಂದ। ಖ್ಯಾತವಾಗಿಹ ಧರ್ಮ ಅರಿತು ಕೊ ಮುಂದು ॥೧॥ ನಿತ್ಯವು ಧರ್ಮವು ವರೆಯುತ್ತಲಿಹುದು। ಹೆತ್ತ ತಾಯಿಯೆ ನಿಜ ದೇವರೆ ಹೌದು। ಧಾತ್ರಿಯೊಳ ದೇವರ ಮೂಲ ಸೋದಿಪುದು। ನೀತಿ ತಾನಲ್ಲೆಂದು ಧರಣಿಯೊಳಿಹುದು ॥೨॥ ಏನಾದರಾಗಲಿ ಎಂತಾದರಿಂದು।

ಈಗ ನೀ ವರೆದೆನ್ನ ಪಾಲಿಸು ಮುಂದು। ಮಾನ ವುಳ್ಳವರು ನೀವು ನಿಮ್ಮಯ ನುಡಿಗೆ । ಎನೊಂದು ಬೇಸರ ವಿರದಮ್ಮ ಕಡೆಗೆ ॥೩॥

ಕೇದಾರಗೌಳ ಅಷ್ಟತಾಳ

ತರಳನೆ ನಿನ್ನಯ ತಂದೆ ಪೂರ್ವದದಿ। ಅರಿಗಳ ಜೈ ಸಲೆಂದು । ಪುರವನ್ನುತ್ಯಜಿಸುತ್ತತೆರಳಿದ ಬಹುದಿನ । ಇರಲು ನಾ ಬೇಸರದಿ ॥೧॥ ಪುರಕೋರ್ವ ರತ್ನದ ವ್ಯಾಪಾರಿ ಬರುತಿಲ್ಲಿ। ಕರೆಸುತ ಲರಮನೆಗೆ । ಪರಮ ರತ್ನವ ನಾಗ ಕ್ರಯಕೆ ನಾ ಪಡೆಯುತ । ಇರುತಿರ ಲಾಗಲಲ್ಲೆ ॥೨॥ ಹುಟ್ಟಲಿಕನುರಾಗ ಶ್ರೇಷ್ಟಿ ಯೊಳಲಲ್ಲಿಯೆ। ಗುಟ್ಟೇನು ಕಂದ ನಿನ್ನ। ಹುಟ್ಟಿಗೆ ಕಾರಣ ಶ್ರೇಷ್ಟಿಯ ನಿಜವೆಂದು। ಕೆಟ್ಟ ಪಾತಕಿಯು ತಾನು ॥೩॥

ಭಾಮಿನಿ

ಜನನಿ ಯಾತಕೆ ಬರಿದೆ ಮರುಗುವೆ। ಋಣವೆ ಯದು ತಾ ಸಕಲ ಕಾರ್ಯಕು। ದಿನವು ನಡೆಸುತ ಲಿಹುದು ಲೋಕದಿ ವರೆಯಲಾಶ್ಚರ್ಯ ॥ ಇನಿತ ದಿರುತಿರೆ ಸತ್ಯ ನುಡಿಯುತ। ಮನಕೆ ತೃಪ್ತಿಯ ತಂದೆ ನಿನ್ನಯ। ತನಯ ನೆಂದಿಗು ಮೂರ್ಖನಲ್ಲವ ದೆನುತ ಹೊರ ಹೊರಟ ॥೧॥

ಕಾಂಭೋದಿ ಝಂಪೆ ತಾಳ

ಇತ್ತ ಲಾ ಮೈನಾಂಕ ಸತ್ಯವನು ತಿಳಿಯುತ್ತ। ಪೃಥ್ವಿಯೊಳು ಋಣವೆಂಬುದಿನ್ನು। ಅತ್ಯಧಿಕವಾಗುತ ಬರುವುದ ಲಲ್ಲಿಗೆ। ಬಿತ್ತರಿಸಲಾರಿಗ ಸ ದಳವು ॥೧॥ ಇನಿತು ಚಿಂತಿಸುತಲಿರೆ ಗೆಳೆಯ ತಾ ಬೋದನು । ವನಿತೆಯಳ ಕೂಡಿ ತಾ ನೈ ದು। ಜನಪ ನಾರ್ದಂಗಿಯಳ ಪೂರ್ವದ ವೃತ್ತಾಂತ। ಸನುಮತದಿ ವರದ ತಾನಂದು ॥೨॥

ಭಾಮಿನಿ

ಕೇಳುತಾಗಲೆ ನೃಪತಿ ಹರುಷದಿ। ಲೀಲೆಯಲಿ ಯಾ ಕುರುಡ ನಿದನನು। ಹೇಳಿದಾ ಪರಿಯಂತದೆಂಬುದ ನರಿಯ ಬೇಕೆನುತ॥ ಅಳು ಮುಖದಲಿ ಕರೆಸು ತಾಗಲೆ। ಹೇಳು ನಿನ್ನಯ ವಿದ್ಯೆ ಕೌಶಲ। ಹೇಳಿದಾ ನುಡಿ ಸತ್ಯವಾಗಿದೆ ನುಡಿದ ಪರಿಯಂತು ॥೧॥ ಚೂತ ಫಲವದು ಕಾಲವಲ್ಲದೆ। ಧಾತ್ರಿಯಲಿ ತಾ ಸಿಗಲಿಕರಿದದು। ಆತು ಹಯದದು ರೋಮ ರೋಮವು। ಯಿನಿತ ನಯವಿರದು ॥ ಆತುರಗ ಕುಡಿದಿಹುದು ಕ್ಷೀರವ। ಆ ದಾತ್ರಿಯಲ್ಲಿ ಗಾರ್ಧವದದೆಂದೆ। ದಾತ ನೊರೆದನು ಬಹಳಸ್ಪಷ್ಟದಿ ನಿಜವದು ಸೂಕ್ಷ್ಮದೊಳು ನಾನು ॥೨॥

ಸೌರಾಷ್ಟ್ರ ತ್ರಿವುಡೆ ತಾಳ

ವರದೆ ನಿನ್ನಯ ತರುಣಿ ಯಂಬಳ। ಪರಿಕಿಸಲು ಸರ್ವಾಂಗ ಸ್ಪರ್ಶಿಸೆ। ತೊರೆದು ಲಜ್ಜೆಯ ಲಿದ್ದಲಲ್ಲದೆ। ದಿಟ್ಟನಿಲುವು ॥೧॥ ಇರಲಿ ಕಾಕೆಯ ವೇಶ್ಯ ಸಂತತಿ। ಇರೆ ನಾಭಿ ಗಂಭೀರದಲ್ಲಿಯೆ। ತರುಣಿ ಗರ್ಭದಿ ಶ್ರೇಷ್ಟ ಕುವರಿಯ। ಜನ್ಮವೆಂದೆ ॥೨॥

ಕೇದಾರಗೌಳ ಅಷ್ಟತಾಳ

ಧರಣಿಪ ನಿನ್ನನು ವೈಶ್ಯನೆಂದುದ ಕೇಳು। ದೊರೆಯಾದ ಮಾಗಧನು। ಹರುಷದಿ ಕೊಡುತಿಹ ಗ್ರಾಸ ತಾ ಹೊತ್ತಿಗೆ। ಎರಡು ಗ್ರಾಸವ ನೀವೆನು ॥೧॥ ಬರುವುದೆ ಸ್ನುತ ನೀನು ಕರೆದೆ ನೀ ಎನ್ನನು। ಪರಿಕಿಸೆ ವಾಣಿಜ್ಯವು। ಇರುವುದೈ ದರೊಳು ವರಪಿತ ವರ್ಣಕ ನೆಂ। ದಿರದಿ ಚಿಂತಿಸು ತೊರೆದೆ ॥ ಕುರುಡ ತಾನೆಂದುದ ಕೇಳುತ್ತ ಜನಪನು ಹರುಷವೆ ತಾಳು ತಿನ್ನು। ತರಳೆಯ ಪರಿಯ ನಾ ನರಿಯುವೆ ಮುಂದಕೆ। ಇರುತಿರೆ ತೋಷದೊಳು ॥

ಸೌರಾಷ್ಟ್ರ ತ್ರಿವುಡೆ ತಾಳ

ಇನಿತು ಹರುಷದಿ ನೃಪನು ದಿರುತಿರರೆ। ಮುನಿಪನಾ ತ್ರಿದಂಡ ನಾ ಸತಿ। ಎಣಿಸೆ ಸಾಧ್ವಿಯ ಧರ್ಮ ಮತಿಯಳು। ಘನದಿ ಮೆರೆಯೆ॥೧॥ ಪರಮ ಪತಿವ್ರತೆಯವಳ ಪಣಿಲಿಪಿ। ಹರಿದು ಬರುತಿರ ಲಾಕೆಯೊಂದಿನ। ಕರದ ದಿನಯನ ಶಿಷ್ಯನಲಿ ತಾ। ಸರಸವಾಡೆ ॥೨॥ ತಿಳಿದು ಮುನಿಪತಿ ಭೂರಿ ಕೋಪದಿ। ಲಲನೆ ಗಾ ಕ್ಷಣ ಶಾಪ ವಿತ್ತನು। ಖಳರ ಜನ್ಮದಿ ಜನನ ಮುಂದಕೆ। ತಿಳಿಯೆ ನಿನಗೆ ॥೩॥ ಶಾಪವೀಯಲು ನಡುಗತಲ್ಲಿಯೆ। ಪಾಪಿ ಹೆಂಗಸು ಬೇಡಿಕೊಂಡಳು। ಕೋಪ ಹಿಂಗುತ ಮುನಿಪ ನಾಕೆಗೆ। ಶಾಪ ಹರವು ॥೪॥

ಭಾಮಿನಿ

ನನ್ನ ಮುಖದೊಳು ವಿದ್ಯವರಿತವ। ನನ್ನು ಸಂಧಿಸಿ ನೀ ನಗದಾತನು। ನಿನ್ನು ಕರುಣೆಯ ನಿಡದೆ ಕೊಲ್ಲಲು ಮುಂದುವರಿಯೆ ॥೧॥ ಕುನ್ನಿ ಯನುತವ ನಿನಗೆ ಬಾಣಗ। ಳನ್ನು ಹೊಡೆಯಲು ತಾಗಿದಾಗಲೆ। ಮುನ್ನ ರೂಪವದೊದಗಿ ಬರುವುದು ಶಾಪ ಮೋಕ್ಷವದು ॥೨॥

ಸೌರಾಷ್ಟ್ರ ತ್ರಿವುಡೆ ತಾಳ

ಇತ್ತಲಾ ಕಾಶ್ಮೀರ ನಗರದಿ। ಪೃಥ್ವಿ ಪಾಲಕ ನಿಂದು ಶರ್ಮನು। ನಿತ್ತನೊಲಗ ನೊಂದು ದಿನ ತಾ। ಪೃಥ್ವಿಯೊಳಗೆ॥೧॥ ಭೋಗ ಭಾಗ್ಯದಿ ತನಗೆ ಲೋಕದೊ। ಳೀಗ ಸರಿ ಸಮರಾರು ಕಾಣಸು। ಭೋಗಕೊದಗುವ ಸತಿಯ ದೋರ್ವಳು। ಈಗ ಕೊರತೆ॥೨॥ ಮನದ ಬೇಸರ ಕಳೆಯ ಲೀಗಲೆ। ಮನಕೆ ಬೇಡರ ಪಡೆಯ ಕೂಡುತ। ಘನದಿ ತೆರಳುವೆ ನೆನುತಾಗಲೆ। ಜನಪ ಪೊರಟ ॥೩॥

ಶಂಕರಾಭರಣ ಮಟ್ಟೆ ತಾಳ

ಬಂದನಾಗ ಭೇಟೆಯಾಡುತ। ಇಂದು ಶರ್ಮ। ಬಂದನಾಗ ಭೇಟೆಯಾಡುತ ॥ ಹಂದಿ ಮೊದಲಾದೆಲ್ಲ ಮೃಗವ। ಕೊಂದು ಕಳೆದು ನಲಿಯುತಲ್ಲಿ। ಮುಂದು ಮುಂದು ಬರುವ ವೇಳೆ। ಅಂದು ಪ್ರಕೃತಿ ಕೋಪಗೊಂಡು। ಒಂದೆ ಸಮನೆ ಬೀಸಿ ಗಾಳಿ। ಮುಂದಕದುವೆ ಸುರೆಯೆ ಮಳೆಯು॥೧॥

ವಾರ್ಧಿಕ

ಪರಿಕಿಸಲು ಬದಲಾಗಿ ಪ್ರಕೃತಿಯು ವಿಕೃತ ದಿಂ। ತಿರು ತಿರುಗಿ ಸುತ್ತುತ ಗಾಳಿಯಿಂ ದೂಳಿನಿಂ। ವರಗಿದವು ಮರಗಿಡವು ಧರೆಯ ಮೇಲೆಲಲ್ಲಿ ಪರಿಪರಿಯ ವಿಕೃತದೊಳು ॥ ಸರಿರಾತ್ರಿ ಯಂಬಂತೆ

ಕತ್ತಲೆಯು ಕವಿಯುತಂ । ಇರದಲ್ಲಿ ಗಗನದಲಿ ಸಂಚಿನಿಂ ಮಿಂಚಿನಿಂ । ಗುರುಗುಡಿಸು ತಬ್ಬರಿಸಿ ಗುಡುಗಿನಿಂ ಸಿಡಿಲಿನಿಂ ನೆಲದ ಮೇಲ್ ಮಳೆ ಸುರಿಯಲು ॥೧॥

ಕಾಂಭೋದಿ ಝಂಪೆತಾಳ

ಧರಣಿಪ ನೆಡೆಯೊಳ ಗಿರುತಿರ್ಪ ಪರಿ ಜನರು । ಕ್ರೂರ ತರ ಪ್ರಕೃತಿಯನ ಕಂಡು । ಘೋರ ಘಟನೆಯ ಮುಂದು ರಕ್ಷಿಪರಿಲ್ಲೆಂದು । ಸಾರಿದರು ಸುಸ್ಥಳವ ಹುಡುಕಿ ॥೧॥ ಆನೆ ಕುದುರೆಯ ಸೇನೆ ಕಂಡ ಕಂಡೊಡೆಯಲ್ಲಿ । ಕ್ಷೋಣಿಯೊಳ ಗೋಡುತ್ತಲಿರಲು । ಮಾನ ನಿಧಿ ನೃಪವರನು ವರ್ಷಧಾರೆಗೆ ಸಿಲುಕಿ । ಕಾಣದ ಕಾಡಿನೊಳು ನಡೆದ ॥೨॥ ಆಸು ಪಾಸಿನೊಳಗಲ್ಲಿ ದಾಸರಾರಿಲ್ಲದಿರೆ । ತೋಷ ನೂನದೊಳಿಲ್ಲ ನೃಪನು । ವರ್ಷ ಧಾರೆಯೊಳು ಸಿಲುಕಿ ಮೂರ್ಛೆಯೊಳಗಾಗಲ್ಲಿ । ಈ ಸು ಶಕ್ತಿಯ ದಿರದೆ ಬಿದ್ದ॥೩॥ ಭೋದ ತಪ್ಪುತಲಲ್ಲಿ ಬಿದ್ದಿರುವ ನೃಪವರನು । ಹಾದಿಯೊಳು ತ್ರಿದಂಡ ಮುನಿಪ। ಬೇಧ ವಿಲ್ಲದೆ ಬರುತ ಮೇಧಿಪನನು ಕಂಡು । ಆದರದೊಳಾಶ್ರಮಕೆ ತಂದು ॥೪॥

ಭಾಮಿನಿ

ಮುನಿಪ ನಲ್ಲಿಯೆ ಬಿದ್ದ ನೃಪನನು । ಕ್ಷಣದಿ ಯತುತ್ತ ಕುಟೀರ ಕೊಯ್ಯುತ । ಘನದಿ ಬಹುಪರಿ ಮದ್ದು ಮಂತ್ರವ ಗೈದು ಚಿಕಿತ್ಸೆಯನು ॥ ದಿನ ದಿನದಿ ಯಾ ನೃಪಗೆ ಜ್ಞಾನವು । ಎಣಿಸಲಲ್ಲಿಯೆ ಬಂದು ಮುನಿಪಗೆ । ಘನದಿ ನಿಮ್ಮಯ ಕೃಪೆಯೊಳುಳಿದೆನು ದೆನುತ ಭಕ್ತಿಯಲಿ ॥೧॥ ಯಾರು ನೀನೆಲೆ ಪುರವದಾವುದು । ಬಾರಿ ಕಾಡಿಗೆ ಬಂದೆ ಯಾತಕೆ । ದಾರಿಯಿಲ್ಲದ ಕಡೆಯೆ ಬೀಳಲು ಕಾರಣವ ದೇನು॥ ಧಾರುಣಿಪ ತಾ ತನ್ನ ಪರಿಯನು । ಬೋರ ನೊರೆಯಲು ತ್ರಿದಂಡ ಮುನಿಯುಪ ॥ ಚಾರು ವಿದ್ಯೆಯ ನವಗದೊರೆಯುತಲಿರ್ದ ದಿನ ದಿನದಿ ॥೨॥

ಕಾಂಭೋದಿ ಝಂಪೆತಾಳ

ಮುನಿಪ ನರ್ಧಾಂಗಿಯು ಧರ್ಮಮತಿಯಂಬುವಳು । ಇನಿಯನಂ ಶಾಪವನಾಂತು। ದನುಜೆಯ ರೂಪದೊಳು ನೇಪಾಳ ಗಡಿಯೊಳಗೆ । ಆ ನಿಮಿಷಗರಿಗೆಲ್ಲ ಭಯ ತರುತ ॥೧॥

ಶಂಕರಾಭರಣ ಮಟ್ಟೆ ತಾಳ

ಶಾಪ ಹೊತ್ತ ಧನುಜೆ ಸ್ಮರನ । ತಾಪವನ್ನು ತಡೆಯದಾಗ । ರೂಪ ಮರಸಿ ಸಿಕ್ಕ ಜನರ । ಪಾಪಿ ಪಿಡಿಯುತ ॥೧॥ ಹೆಂಗಳನ್ನು ಕಂಡದೊಡನೆ । ತುಂಗ ಕುಚವನೊತ್ತಿ ಎದೆಗೆ । ಹಿಂಗದಲ್ಲಿ ಮದನ ತಾಪ । ಭಂಗ ಪಡಿಸುತ ॥೨॥ ಪುರುಷರನ್ನು ಕಂಡ ಮಾತ್ರ । ಭರಿತ ಮುಷ್ಟಿಯಿಂದ ಗುದ್ದಿ । ಭರಿತ ಹಿಂಸೆ ಕೊಡುವ ಪರಿಯ । ವರೆಯಲಸದಳ ॥೩॥

ಕೇದಾರಗೌಳ ಝಂಪೆತಾಳ

ಮಾರತಾಪಕೆ ಯನ್ನುತ । ಧನುಜೆಯಳು । ನಾರಿಯರ ಬಿಗಿದಪ್ಪುತ । ತೀರದಿರಲಾ ಚೇಷ್ಟೆಯು। ಮತ್ತಲ್ಲಿ।ಯಾರು ಸಿಗುವರು ಎನ್ನುತ॥೧॥ ಸುರ ನರೊರುಗ ಯಕ್ಷಪುರದ । ಸ್ತ್ರೀಯರದು । ಸೆರೆಯಾ ಸಿಕ್ಕಿಯರು ಬರಿದು । ಪರಿಹಾರವನು ಕಾಣದೆ । ಸುರಪತಿಯು । ದಿರಲಿತ್ತಾ ಲಾ ನಾಕದದಿ ॥೨॥

ಭಾಮಿನಿ

ಧನುಜೆಯು ಪಟಳವನ್ನು ತಡೆಯದೆ । ಅನಿಮಿಸರ ಪತಿಗೆಡೆಗೆ ಸಾರುತ । ಇನಿತದಲ್ಲಿಯೆ ನೊರದರಾಕ್ಷಣ ಯಕ್ಷಮೊದಲಾದ ॥ ಜನರ ಮಾತಿನ ಮರ್ಮ ವರಿಯುತ । ಮುನಿಪ ಶಿಷ್ಯನದಲ್ಲ ದೀಕೆಯ । ಹನನ ಸಾಧ್ಯವದೆಂದು ನಿಶ್ಚಯ ಗೈದ ಸುರಪಾಲ ॥೧॥

ಕೇದಾರಗೌಳ ಅಷ್ಟತಾಳ

ಸುರಪಾಲ ನೀ ತೆರದಿರುತಿರ ಅತ್ತಲು । ಪುರಜನರೊಂದಾಗುತ । ಧರಣಿಪ ನೆಡೆಯೊಳ ಗೊರದರ ದೀತೆರ । ಧುರುಳೆಯ ಕಾರ್ಯವನ್ನು ॥೧॥

ಮುಖಾರಿ ಆದಿತಾಳ

ಕೇಳಯ್ಯ ದೊರೆಯೆ ನೀನು । ಕೃಪಾಲ ನೀ । ಲಾಲಿಪ ಬೇಕಿದನು । ಹೇಳದೆ ಕೇಳದೆ ದಾಳಿಯ ನಿಡುತಲಿ । ಕೋಳು ಗೊಂಬುವ ಪರಿ । ಖೂಳೆಯಾ ರಕ್ಕಸಿ । ತೋಳಿನ ಬಲದಲಿ ಹಿಂಸಿಸಿ ಪುರುಷರ। ಲೀಲೆಯೊಳಿರುವಳು ವರೆಯಲಿ ಕಸದಳ ॥೧॥ ಬಾಲೆಯರನು ಕಾಣುತ । ರಕ್ಕಸಿಯಳು । ಮೇಲಿನಿಂದಲಿ ಹಾಯುತ । ನೀ ಲಾದ ಕರದೊಳು ಬಾಲೆಯ ಹಿಡಿಯುತ । ತೋಳೊಳಗಪ್ಪುತ ಮಾರನ ರುಚಿಕದು । ಹೇಳಲು ನಾಚಿಕೆ ಹೇಸಿಗೆ ಯಾ ಪರಿ । ಖೂಳೆಯು ಬಿಡದಲೆ ಗುಹೆಯೊಳ ಗಿರಿಸುತ ॥೨॥

ಭಾಮಿನಿ

ದೂರಲೀತೆರ ಸಕಲ ಜನಗಳು । ಭೂರಿ ಚಿಂತೆಯ ತಾಳ್ದು ನೃಪತಿಯು । ಯಾರು ಇಲ್ಲಿಗ ದೈದಲೆಂತದು ತಿಳಿಯಲಸದಲವು ॥ ಶ್ರೀ ರಮಣ ನಿದನ್ನೆಲ್ಲ ಬಲ್ಲನು । ತೋರಿ ದಾರಿಯ ಪೊರೆಯಾ ಎನುತಿರೆ । ಸಾರಲಲ್ಲಿಗೆ ದೇವರೊಡೆಯನ ಕಂಡು ಭೂವರನು ॥೧॥

ಬೇಗಡೆ ಅಷ್ಟತಾಳ

ಅನಿಮಿಷರ ದೊರೆಯನ್ನು ಕಾಣುತಲಿ । ಭಕ್ತಿ ಭಾವದಿ । ಮಣಿದು ಶಿರವನು ಹರುಷದಿಂದಲ್ಲಿ। ಕ್ಷಣದಿ ಸ್ವಾಗತ ಕೋರಿ ಭೂವರ । ಮನೆಗೆ ಹರಿಸುತ ದೇವರೊಡೆಯನ । ಘನದ ಪೀಠದಿ ಕುಳಿಸು ತಾ ಕ್ಷಣ । ಜನಪ ಪೂಜೆಯ ಗೈದ ವಿಧ ವಿಧ ॥೧॥ ಧರಣಿಪತಿ ಬಹು ಭಕ್ತಿ ಬಾವದಲಿ । ಪೂಜಿಸುತ್ತಲೆ। ಶಿರವ ಬಾಗುತ ಕರವ ಮುಗಿಯುತಲಿ । ಇರಲಿಕಲ್ಲಿಯ ಸುರಪ ಕಾಣುತ । ಭರಿತ ಚಿಂತೆಯ ದೇನ ನೀಗದ ದುರಿತ ಪರಿಹಾರ ಗೈವ ಮಾರ್ಗವ । ವರೆವೆ ನಿಗೆಲೆ ಮನದ ಭಯ ಬಿಡು ॥೨॥

ಕೇದಾರಗೌಳ ಅಷ್ಟತಾಳ

ಧರಣಿಪನಾಗಲೆ ಭರಿತ ಭಕ್ತಿಯೊಳೆರಗಿ । ವರದನು ದೈನ್ಯದಿಂದ । ಧುರುಳೆ ಯೋರ್ವಳು ತನ್ನ ಪುರದ ಗಡಿಯೊಳು ನಿಂದು । ಪರಿ ಕಷ್ಟವನೀಗಲು ॥೧॥ ಕೊಡುವಳು ದಿನ ದಿನ ಪರಿಹಾರ ಕಾಣೆನು । ಮಿಡುಕುತಲಿದೆ ಮನವು । ನುಡಿಯುವೆ ಪರಿಹಾರವೆನ್ನುತಾಗಲೆ । ನುಡಿದ

ಪುರಂದರನು॥೨॥ ಧನುಜೆಯ ಕೊಂದಗೆ ತನಯಳ ಕೊಡುತಿನ್ನು। ಗುಣದಿಂದ ಲಗ್ನವನು। ತನಯಳ ಜೊತೆಯಲ್ಲೆರಾಜ್ಯವ ಕೊಡುವೆನೆಂ। ದೆನುತಲಿ ಡಂಗುರವ॥೩॥ ಸಾರೆನುತಾಕ್ಷಣ ಸುರಪ ತಾ ತೆರಳಲು। ಚಾರಕ ಮುಖದೊಳಗೆ। ಸಾರಿದ ಡಂಗುರ ಕೇಳುತ್ತ ಹಲ ಜನ। ಘೋರ ರಕ್ಕಸಿ ಕೊಲ್ಲಲು॥೪॥ ಆಗದ ದವರಿಂದ ರಕ್ಕಸಿಯವರನ್ನೂ। ಸಾಗಿಸುತೆ ಮಪ್ಪುರಿಗೆ। ಹೋಗಿಹ ಪರಿಕಂಡ ಜನಪ ನಚ್ಚರಿ ತಾಳೆ। ಆಗ ಲಾ ಮನದೊಳಗೆ॥೫॥ ಇಂದು ಶರ್ಮನು ತಾ ನಂದು ಬಹು ಚಿಂತಿಸಿ। ನೆಂದನು ಮುನಿಯೊಳಗೆ। ಅಂದು ತಾ ಮನ ದೊಳಗಿರುತಿಹ ಪರಿಯನ್ನೂ। ನೆಂದನು ದೈನ್ಯದಿಂದ॥೬॥

ಭಾಮಿನಿ

ವರದ ನಾಗಲೆ ಮುನಿಪ ನಿಮ್ಮಯ। ಕರುಣ ದೊಳಗದಿಕ ವಿದ್ಯೆಯ। ನರಿತೆ ನಾದರು ಯನ್ನ ಪುರ ಪರಿಯಂತೊ ತಿಳಿಯದದು ॥ ತೆರಳು ತೀಗಲೆ ಪ್ರಜೆಯ ರಂಜಿಪ। ಇರವದೆನ್ನದು ಕಳುಹಿ ಹರುಷದಿ। ವರೆಯ ಮುನಿಪಗೆ ನೃಪನಿಗೆಂದನು ಬಳಿಕ ಲೀ ತೆರದಿ॥೧॥

ಸೌರಾಷ್ಟ್ರ ತ್ರಿವುಡೆ ತಾಳ

ಗುರುವು ಶಿಷ್ಯನ ಕ್ರಮಕೆ ತನ್ನಯ। ಶಿರವ ತೂಗುತ ಲೊರದ ನೀತೆರ। ತರಳೆ ಮುಂದಕೆ ನಿನಗೆ ಲಭ್ಯವು। ತರುಣಿ ಮಣಿಯು॥೧॥ ದೊರಕಲವಳನು ಕೂಡಿ ನಿನ್ನಯ। ಧರಣಿಯನು ನೀ ಸೇರಿ ಧರ್ಮದಿ। ಧರೆಯ ಪಾಲಿಸು ಹಲವು ಕಾಲವು। ಕಳುಹಲಲ್ಲಿ॥೨॥

ಕೇದಾರಗೌಳ ಝಂಪೆ ತಾಳ

ಪರಿ ಪರಿಯ ದೇಶವನ್ನು। ಸುತ್ತುತ್ತಲಿ। ಧರಣಿ ನೇಪಾಲಕಿನ್ನು। ಬರದಿಯಾಗಲೆ ಸೇರುತ। ನಿಶಿಯಲ್ಲಿ। ಇರುವುದಿ ಗೆಲ್ಲಿಎನುತ॥೧॥ ಬರುತಿರಲಿ ಕಾಪುರದಲಿ। ಮುದುಕಿ ತಾ। ನಿರುತಿರೆ ಸ್ವಗೃಹದಲಿ। ಅರಿಯುತಾ ಧರಣಿಪಾಲ। ಗ್ರಹಿಸುತಲಿ। ಕರೆದಾಗ ಕೇಳ್ದನವಳ॥೨॥ ಪರಿ ಪರಿಯ ಜನರ ದಿಂತು। ಅತ್ತಿತ್ತ। ಪರಿಕಿಸುತ ಲೋಡುವುದೆಂತು॥ ಇರುಳಿನೀ ಭಯವ ದೇಕೆ। ತಿಳಿಸಿದರೆ। ಅರಿಯುವ ಬರಿಯ ಬಯಕೆ॥೩॥ ಯಾರೆಲೆ ನೀ ನೆಲ್ಲಿಯವನು। ನೀನಿತ್ತ। ಸಾರಿ ಕೇಳುವ ಪರಿಯದೇನು। ಊರಿದುವೆ ನೇಪಾಳವೆಂದು। ಕರೆಯುವರು। ಘೋರ ರಕ್ಕಸಿಯ ಇಂದು॥೪॥ ಗಿರಿ ಶಿಖರದಲ್ಲಿಯೆ ನಿಂದು। ಭಯವನ್ನ ತರ ತರದಿ ತರುತಲಿಂದು। ಪೋರಿ ಪೋರರ ಕಾಣುತ। ಹಿಂಸಿಸುತ। ಬಾರಿ ಬಾರಿಗು ನಲಿಯುತ॥೫॥

ಭಾಮಿನಿ

ಹದದ ಜವ್ವನೆ ಯರನು ಕಾಣುತ। ಮುದವ ನೂನದಿ ಪಿಡಿಯು ತ್ತೊಯುತ। ಎದೆಯೊಳಪ್ಪುತ ಕಚ್ಚಿತಿಕ್ಕುತ ನಲಿವು ತೋರದಿರೆ॥ ಅದುವೆ ಗುಹೆಯಲಿ ಸೆರೆಯೊಳಿಡುತಲಿ। ಮದದಿ ಪುರುಷರ ಕಂಡ ಮಾತ್ರದಿ। ಒದೆದು ಬಡಿಯುತ ಹಿಂಸೆ ಗೈಯುತ ನಗೆಯ ಸೂಸುವಳು॥೧॥

ಸೌರಾಷ್ಟ್ರ ತ್ರಿವುಡೆ ತಾಳ

ಆ ದುರಂತದ ರಕ್ಕಸಿಯಳನು। ಈ ಧರೆಯಾಳವ ನಾರು ಕೋಲ್ವರೊ। ಮೋದದಿಂದಲಿ ತನ್ನ ಸುತೆಯಳ। ಕೊಡುವೆನೆಂದು ॥೧॥ ಮೇಧಿನಿಪ ತಾ ಹೊಡೆದು ಡಂಗುರ। ಕಾದುವಾ ಪರಿಯಿಂದ ಹಲವರು। ಈ ಧುರುಳೆಯಲಿ ಸೆರೆಯೆ ಸಿಕ್ಕಿಯೆ ನರಳುತಿಹರು ॥೨॥

ಮಾರವಿ ಏಕತಾಳ

ವೃದ್ಧೆಯ ಮಾತನು ಕೇಳುತ ಭೂವರ। ಕ್ರುದನು ತಾ ನಾಗೆ। ಮರ್ಧಿಪೆ ಧನುಜೆಯ ನೆನ್ನುತಾಗಲೆ। ಸಾರ್ದನು ಗಿರಿಯಡೆಗೆ ॥೧॥ ಧುರುಳೆಯು ಬರುತಿಹ ಪುರುಷಗೆ ಬಡಿದಳು। ಬರ ಸಿಡಿಲಂತದು। ತರ ಹರಿಸು ತಾ ಕ್ಷಣ ಹಿಂಜರಿಯುತಲಾ। ಧುರುಳೆಗೆ ಬಡಿದೆಂದ ॥೨॥ ಕುನ್ನಿ ರಕ್ಕಸಿ ನಿನ್ನ ಮಣ್ಣಿಗೆ ಸೇರಿಪೆ। ನಿಲ್ಲೆ ನಿಸುವ ಈಗ। ಕುನ್ನಿ ನಿ ನದವಮಳೆ ಪಾಪಿಯೆ ಎನುತಲಿ। ಮುನ್ನುಸುರುತಲಂದು ॥೩॥

ಭಾಮಿನಿ

ಕೋಪದಿಂದಲಿ ಶರವ ಹೂಡಿದ। ಪಾಪಿ ರಕ್ಕಸಿಯನ್ನು ತಾಗಲೆ। ಆ ಪತಿವೃತೆ ಗಂಬ ನಾಂಟಲು ಬಾರಿ ಗರ್ಜಿಸುತ॥ ರೂಪ ಬೇರೆಯದಾಗಿ ವನಿತೆಯು। ಶಾಪ ವಿಂಗಲು ಮುನಿಪ ನರಿಯುತ। ಲಾ ಪ್ರದೇಶಕೆ ಸಾರಲಲ್ಲಿಯೆ ಭೂಪ ಜನ ಸಹಿತ ॥೧॥

ಸೌರಾಷ್ಟ್ರ ತ್ರಿವುಡೆ ತಾಳ

ಬಂದು ನಮಿಸಿಯ ಮುನಿಪ ಸಂಗ್ರಿಗೆ। ಮಂದಗಾಮಿ ನಿ। ಲಜ್ಜೆಯೊಳಗಿರೆ। ಅಂದು ಸಂತಸದಿಂದ ಮುನಿಪನು। ಎಂದ ನಿಂತು ॥೧॥ ಇಂದು ನೀ ಪತಿವೃತೆ ಯ ದೆನ್ನುತ। ಇಂದುಮುಖಿ ಯಾ ಧರ್ಮಮತಿಯಳ। ಆದು ಲಗ್ನವ ಗೈಸಿದನು ಆ। ನಂದದಿಂದ ॥೨॥

ಕೇದಾರಗೌಳ ಅಷ್ಟತಾಳ

ಮಂಗಳವಾಗಲಿ ವಧುವರರಿಗೆ ಮತ್ತೆ। ಮಂಗಳವಾಗಲಿ ಸರ್ವರಿಗೆ। ಮಂಗಳವಾಗಲಿ ಸುರ ನರರಿಗೆ ನಿತ್ಯ ॥ ಮಂಗಳ ಸುವಸ್ತುವಿಗೆ ॥೧॥ ತರುಣಿಯ ನೊಡಗೊಂಡು ತೆರಳಲು ಮುನಿಪನು। ಧರಣಿಪ ನವ ವಧುವ। ವರಸಿಯೆ ಕಾಶ್ಮೀರ ಪುರವನ್ನು ಸೇರುತಾ। ಧರೆಯ ತಾ ನಾಳಿದನು ॥೨॥

****

ಬಿ. ಎ. ಎನ್. ಉಪಾಧ್ಯಾಯ

ಲೇಖಕರು

ಶ್ರೀ ವಿಷ್ಣುಮೂರ್ತಿ ಯಕ್ಷಗಾನ ಸಂಘ, ಬೀಜಾಡಿ

ಇವರು ಪ್ರಕಟಿಸಿದ ಪುಸ್ತಕಗಳು

1. ನವ ನಂದರ ಕಪಟ ತಂತ್ರ (ಯಕ್ಷಗಾನ)
2. ಚಾಣಕ್ಯ ತಂತ್ರ (ಯಕ್ಷಗಾನ)
3. ಗರುಡ ಪುರಾಣ (ಭಾಮಿನಿ ಷಟ್ಪದಿ)
4. ವಿಷ್ಣು ರಹಸ್ಯ (ಭಾಮಿನಿ ಷಟ್ಪದಿ)
5. ಗಾಯತ್ರಿ ಮಂತ್ರ
6. ಕುಂಭಾಸಿ ಕ್ಷೇತ್ರ ಮಹಾತ್ಮೆ (ಯಕ್ಷಗಾನ)
7. ವಿಧಿಲೀಲೆ (ಯಕ್ಷಗಾನ)
8. ಸುಧನ್ವ ಕರ್ಣಾರ್ಜುನರ ಅರ್ಥಗಾರಿಕೆಯ ಕ್ರಮ
9. ಅನುಭವಾಮೃತ (ಯಕ್ಷಗಾನ)
10. ಶೂನ್ಯದಿಂದನಂತ (ಗದ್ಯ)